ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 226 RNI Number : KNKAN/25/A2770 27-08-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :226 ರಾಯಚೂರು 27-08-2026 ಗುರುವಾರ ಪುಟ 04 ಬೆಲೆ ರೂ.2/- ಮೊ:8660146563

102 ತಾಲೂಕುಗಳ ಗ್ರೌಂಡ್ ಟ್ರೂಥಿಂಗ್ ವರದಿ ಬಂದಿದ್ದು, ಮುಂದಿನ ಸಂಪುಟ ಸಭೆಯಲ್ಲಿ ಬರ ಘೋಷಣೆ

ಬೆಂಗಳೂರು: ರಾಜ್ಯದ ಬರ ಪರಿಸ್ಥಿತಿಯ ಸಮಗ್ರ ಅವಲೋಕನ ನಡೆಯುತ್ತಿದೆ. 102 ತಾಲೂಕುಗಳ ಗ್ರೌಂಡ್ ಟ್ರೂಥಿಂಗ್ ವರದಿ ಬಂದಿದ್ದು, ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಬರ ಘೋಷಣೆ ಮಾಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಸದಾಶಿವನಗರದ ಗೃಹ ಕಚೇರಿ ಬಳಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಮಾನದಂಡಗಳಿಗೆ ಅನುಗುಣವಾಗಿ ಬರ ಘೋಷಿಸುತ್ತೇವೆ. ಪ್ರತಿ ವಾರವೂ ಬರ ಪರಿಶೀಲನೆ ನಡೆಸುತ್ತೇವೆ ಎಂದರು.

ಬರ ಪರಿಸ್ಥಿತಿ ಅವಲೋಕಿಸಲು ಬಿಜೆಪಿಯವರು ಕೂಡ ತಂಡ ಮಾಡಿಕೊಂಡು ಹೋಗಿದ್ದರು. ಆದರೆ ಆ ಬಗ್ಗೆ ಸದನದಲ್ಲಿ ಚರ್ಚೆಯೂ ಮಾಡಿಲ್ಲ. ಮುಖ್ಯಮಂತ್ರಿಗಳಿಗಾಗಲಿ, ಕಂದಾಯ ಸಚಿವನಾದ ನನಗಾಗಲಿ ವರದಿ ಅಥವಾ ಪತ್ರವನ್ನೂ ನೀಡಿಲ್ಲ. ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ ರೈತರಿಗೆ ಬೆಳೆ ನಷ್ಟವಾಗಿದೆ. ವಿರೋಧ ಪಕ್ಷದವರು ಈ ಬಗ್ಗೆ ಚರ್ಚೆಗಳನ್ನು ಮಾಡಿ, ಸಲಹೆಗಳನ್ನು ಕೊಡಬೇಕು. ಆ ಕೆಲಸ ಮಾಡುವ ಬದಲು ಸದನದಲ್ಲಿ ಬರೀ ರಾಜಕೀಯ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪರಮೇಶ್ವರ್ ಅವರನ್ನು ಉಪ ಮುಖ್ಯಮಂತ್ರಿಗಳನ್ನಾಗಿ ಮಾಡಿ ಎಂದು ಹೈಕಮಾಂಡ್‌ಗೆ ಒತ್ತಾಯಿಸಿರುವುದಾಗಿ ಸಿದ್ದರಾಮಯ್ಯನವರ ಹೇಳಿಕೆಯ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಅವರು ರಾಜೀನಾಮೆ ನೀಡುವ ವೇಳೆ ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂದು ಹೇಳಿದ್ದರು. ಅದನ್ನು ಹೈಕಮಾಂಡ್ ಪರಿಗಣನೆಗೆ ತೆಗೆದುಕೊಂಡಿಲ್ಲ. ಉಪಮುಖ್ಯಮಂತ್ರಿಯಾಗಿ ನನ್ನನ್ನು ಮಾಡಬೇಕು ಎಂದೂ ಅವರು ಹೇಳಿದ್ದಾರೆ. ಹಾಗಾಗಿ ಸಿದ್ದರಾಮಯ್ಯನವರು ಹೇಳಿರುವುದು ಸತ್ಯ ಎಂದರು.

ನಾಗೇಂದ್ರ ಅವರ ರಾಜೀನಾಮೆ ಕುರಿತ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಡಿಸಿಎಂ, ಇಂದು ಅಥವಾ ನಾಳೆ ಮುಖ್ಯಮಂತ್ರಿಗಳು ದೆಹಲಿಗೆ ಹೋಗುತ್ತಾರೆ. ಹೈಕಮಾಂಡ್ ಭೇಟಿಯಾದರೆ ಅಲ್ಲಿ ಈ ಬಗ್ಗೆ ಚರ್ಚೆಗಳು ನಡೆಯಬಹುದು. ಸಂಪುಟ ಪುನಾರಚನೆ ಊಹಾಪೋಹವಷ್ಟೇ. ಹೈಕಮಾಂಡ್ ತೀರ್ಮಾನದಂತೆ ಆಗುತ್ತದೆ ಎಂದು ತಿಳಿಸಿದರು.

ಯಾವ ಚಾರ್ಜ್‌ಶೀಟ್‌ನಲ್ಲೂ ನಾಗೇಂದ್ರ ಅವರ ಹೆಸರು ಇಲ್ಲ. ನಾನು ಗೃಹಸಚಿವನಾಗಿದ್ದವನು. ನನಗೆ ಮಾಹಿತಿಯಿದೆ. ಸಿಬಿಐ ತನಿಖೆ ಮಾಡುವ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ತೀರ್ಮಾನ ಆಗುತ್ತದೆ. ಈ ವಿಚಾರದಲ್ಲಿ ಬಿಜೆಪಿ ಪಾದಯಾತ್ರೆ ಮಾಡುತ್ತಿರುವುದು ರಾಜಕೀಯವಷ್ಟೇ. ಸದನದಲ್ಲೂ ಪ್ರಶ್ನೆಗಳನ್ನು ಕೇಳಿ ಉತ್ತರಿಸಲು ನಾವು ಸಮರ್ಥರಿದ್ದೇವೆ ಎಂದು ಹೇಳಿದ್ದೆವು. ಆದರೆ ಈಗ ಪ್ರತಿಭಟನೆ ಮಾಡುತ್ತಿದ್ದಾರೆ ಎಂದು



ಪ್ರತಿಕ್ರಿಯಿಸಿದರು.

ಉದ್ಯಾನವನಗಳ ಶೇ.5ರಷ್ಟು ಜಾಗಗಳ ಬಳಕೆಗೆ ವಿರೋಧ ವ್ಯಕ್ತವಾಗುತ್ತಿರುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸಾರ್ವಜನಿಕ ಉದ್ದೇಶಕ್ಕಾಗಿ ಜಾಗ ಬಳಕೆಯಾಗಲಿದೆ. ಅದು ನಿರ್ದಿಷ್ಟವಾಗಿ ಕಾರ್ಪೊರೇಶನ್‌ನವರು ಮಾಡಿದಾಗಲೇ ತಿಳಿಯುತ್ತದೆ ಎಂದು ಹೇಳಿದರು.

ರಸ್ತೆ ಬದಿಯಲ್ಲಿ ನಿಲ್ಲಿಸುವ ವಾಹನಗಳಿಗೆ ಶುಲ್ಕ ಪಾವತಿಸುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿ, ನಾನು ಬೆಂಗಳೂರು ಉಸ್ತುವಾರಿ ಸಚಿವನಾಗಿದ್ದ ಸಮಯದಲ್ಲೂ ಈ ಬಗ್ಗೆ ಚರ್ಚೆಗಳನ್ನು ಮಾಡಿದ್ದೆವು. ರಸ್ತೆಗಳು ಇರುವುದು ಜನ ಓಡಾಡುವುದಕ್ಕೆ. ಎರಡೂ ಬದಿಯಲ್ಲಿ ವಾಹನಗಳನ್ನು ನಿಲ್ಲಿಸಿದರೆ ರಸ್ತೆಗಳು ಕಾಣುವುದೇ ಇಲ್ಲ. ಹಾಗಾಗಿ ಈ ಬಗ್ಗೆ ಚರ್ಚೆಗಳು ನಡೆಯುತ್ತಿದ್ದು, ತೀರ್ಮಾನ ಗೊತ್ತಾಗಲಿದೆ ಎಂದರು.

ಸಿಂಧನೂರಿನಲ್ಲಿ ಅದ್ದೂರಿಯಾಗಿ ನಡೆದ ಮಿಲಾದುನ್ನಬಿ ಆಚರಣೆ; ಸ್ತಬ್ಧ ಚಿತ್ರಗಳ ಭವ್ಯ ಮೆರವಣಿಗೆ



ಸಿಂಧನೂರು: ಪ್ರವಾದಿ ಮುಹಮ್ಮದ್ (ಸ.ಅ) ಅವರ ಜನ್ಮದಿನಾಚರಣೆ ಜಶ್ನೇ ಮಿಲಾದುನ್ನಬಿ ಬುಧವಾರ ಮುಸ್ಲಿಂ ಬಾಂಧವರು ನಗರದಲ್ಲಿ ಅದ್ದೂರಿಯಾಗಿ ಆಚರಿಸಿದರು.

ನಗರದ ಮಹಿಬೂಬಿಯಾ ಕಾಲೋನಿಯ ನೂರಾನಿ ಮಸ್ಜಿದ್‌ನಲ್ಲಿ ಈದ್ ಆಚರಣಾ ಸಮಿತಿಯಿಂದ ಮೆರವಣಿಗೆ ಉದ್ಘಾಟನಾ ಕಾರ್ಯಕ್ರಮವು ನಡೆಯಿತು. ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ ಮಾತನಾಡಿ, ಸಿಂಧನೂರು ಸೌಹಾರ್ದತೆಗೆ ಹೆಸರುವಾಸಿಯಾಗಿದೆ. ಶಾಂತಿ, ಸೌಹಾರ್ದತೆ, ಮಾನವೀಯತೆಯಿಂದ ಹಬ್ಬ ಆಚರಿಸುವ ಮೂಲಕ ಮಾದರಿ ಸಿಂಧನೂರು ನಿರ್ಮಿಸಲು ಎಲ್ಲರೂ ಪಣತೊಡಬೇಕು. ಪ್ರವಾದಿಯವರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ಮೌಲ್ಯಯುತ ಜೀವನ ನಡೆಸಬೇಕು ಎಂದರು.

ಜೆಡಿಎಸ್ ಯುವ ಮುಖಂಡ ಅಭಿಷೇಕ ನಾಡಗೌಡ ಮಾತನಾಡಿ, ನಾವೆಲ್ಲರೂ ಒಂದೇ ಎನ್ನುವ ಭಾವನೆ ಎಲ್ಲರಲ್ಲಿ ಮೂಡಿದಾಗ ಮಾತ್ರ ಹಬ್ಬಗಳಿಗೆ ನಿಜವಾದ ಅರ್ಥ ಬರುತ್ತದೆ. ಮಹನೀಯರ ಜೀವನದ ಸಂದೇಶಗಳನ್ನು ಪಾಲಿಸಿ, ಶಾಂತಿಯಿಂದ ಬದುಕು ಸಾಗಿಸಬೇಕು ಎಂದರು.

ಜಮಾಅತೆ ಇಸ್ಲಾಮಿ ಹಿಂದ್ ತಾಲೂಕು ಘಟಕದ ಅಧ್ಯಕ್ಷ ಟಿ. ಹುಸೇನ್ ಸಾಬ್, ಹಿರಿಯ ಮುಖಂಡ ಹೆಚ್. ಎನ್. ಬಡಿಗೇರ, ಮೌಲಾನಾ ಹಾಫಿಝ್ ಮೆಹರಾಜ್ ಮೌಲಾನಾ ಮಾತನಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ರಾಜುಗೌಡ ಬಾದರ್ಲಿ, ಮುಖಂಡರಾದ ಸೈಯದ್ ಬಾಬರ್ ಪಾಷಾ ವಕೀಲ, ಮಹ್ಮದ್ ಅಲ್ತಾಪ್ ಸಾಹುಕಾರ್, ಖಾಜಿಮಲಿಕ್ ವಕೀಲ, ಸೈಯದ್ ಹಾರೂನ್ ಸಾಹೇಬ್, ಹಾಜಿಮಸ್ತಾನ್, ಮೆಹೆಬೂಬ್ ಖಾನ್ ಸಾಬ್, ಶಿವು ಪಾಟೀಲ್ ಗುಂಜಳ್ಳಿ ಸೇರಿದಂತೆ ರಾಜಕೀಯ ಮುಖಂಡರು, ವಿವಿಧ ಸಮಾಜಗಳ ಮುಖಂಡರು ಇದ್ದರು.

ಭವ್ಯ ಮೆರವಣಿಗೆ:

3ನೇ ಪುಟ.....

ಲಿಂಗಸುಗೂರು ಕೊಲೆ ಪ್ರಕರಣ: ಸಂತ್ರಸ್ತ ಕುಟುಂಬಕ್ಕೆ ಅಂಜುಮನ್ ಸಮಿತಿಯಿಂದ ಸಾಂತ್ವನ, ನೆರವು



ಲಿಂಗಸುಗೂರು: ಪಟ್ಟಣದ ಪುರಸಭೆ ವ್ಯಾಪ್ತಿಯ ವಾರ್ಡ್ ನಂ. 1ರ ಕರಡಕಲ್‌ಜಾಲಿಬೆಂಚಿ ರಸ್ತೆಯ ಪಕ್ಕದ ಖಾಸಗಿ ಜಮೀನಿನಲ್ಲಿ ಕೊಲೆಯಾಗಿದ್ದ ಕರಡಕಲ್ ನಿವಾಸಿ ರಾಣಿ ಅವರ ಸಾವಿಗೆ ಕೊನೆಗೂ ನ್ಯಾಯ ದೊರೆತಿದೆ ಎಂದು ಅಂಜುಮನ್ ಸಮಿತಿ ತಿಳಿಸಿದೆ.

ಬಡ ಕುಟುಂಬಕ್ಕೆ ಬೆನ್ನೆಲುಬಾಗಿ ನಿಂತು, ಆರೋಪಿಗಳಿಗೆ ತಕ್ಕ ಶಿಕ್ಷೆಯಾಗಬೇಕು ಹಾಗೂ ಸಂತ್ರಸ್ತ ಕುಟುಂಬಕ್ಕೆ ನ್ಯಾಯ ದೊರೆಯುವವರೆಗೂ ನಿರಂತರವಾಗಿ ಧ್ವನಿ ಎತ್ತಿ ಹೋರಾಡಿದ ಕರಡಕಲ್ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಸಮಿತಿ ನಾಮನಿರ್ದೇಶಿತ ಸದಸ್ಯ ಮೋಹನ್ ಗೋಸ್ಲೆ ಹಾಗೂ ಅವರ ತಂಡದ ಎಲ್ಲ ನಾಯಕರಿಗೆ ಅಂಜುಮನ್ ಸಮಿತಿ ಅಭಿನಂದನೆ ಸಲ್ಲಿಸಿದೆ.

ಸಂತ್ರಸ್ತ ಕುಟುಂಬಕ್ಕೆ ಸಾಂತ್ವನ, ನೆರವು ಅಂಜುಮನ್ ಸಮಿತಿಯ ಪದಾಧಿಕಾರಿಗಳು ಹಾಗೂ ಸದಸ್ಯರು ಕರಡಕಲ್ ಗ್ರಾಮದಲ್ಲಿರುವ ಸಂತ್ರಸ್ತ ಕುಟುಂಬದ ಮನೆಗೆ ಭೇಟಿ ನೀಡಿ ಧೈರ್ಯ ತುಂಬಿ, ರೇಷನ್ ಕಿಟ್ ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಂಜುಮನ್-ಎ-ಮುಸ್ಲಿಮೀನ್ ಲಿಂಗಸುಗೂರು ತಾಲೂಕು ಸಮಿತಿಯ ನಾಯಕರು, ಹುಟ್ಟು-ಸಾವು ಎಂಬುದು ಪ್ರತಿಯೊಬ್ಬರಿಗೂ ಒಂದಲ್ಲ ಒಂದು ದಿನ ಬಂದೇ ಬರುತ್ತದೆ. ಆದರೆ ಯಾವುದೇ ಸಮುದಾಯದ ಮೇಲಾದರೂ ಅನ್ಯಾಯ, ದೌರ್ಜನ್ಯ ಹಾಗೂ ಕೊಲೆಯಂತಹ ಘಟನೆಗಳು ನಡೆದಾಗ ಯುವಕರು ಅದನ್ನು ಸಹಿಸದೆ ನ್ಯಾಯಕ್ಕಾಗಿ ಧ್ವನಿ ಎತ್ತಬೇಕು ಎಂದರು.

ಕುಟುಂಬಕ್ಕೆ ಯಾವುದೇ ರೀತಿಯ ತೊಂದರೆ ಅಥವಾ ಸಮಸ್ಯೆ ಎದುರಾದರೆ ತಕ್ಷಣ ಅಂಜುಮನ್ ಸಮಿತಿಗೆ ಅಥವಾ ತಮ್ಮೊಂದಿಗೆ ಇರುವ ನಾಯಕರಿಗೆ ಫೋನ್ ಮಾಡಿ ತಿಳಿಸುವಂತೆ ಅಂಜುಮನ್ ಸಮಿತಿ ಅಧ್ಯಕ್ಷರು ಮನವಿ ಮಾಡಿದರು.

3ನೇ ಪುಟ.....

ರಾಯಚೂರಿನಲ್ಲಿ ರಾಜ್ಯಮಟ್ಟದ ರಿಂಕ್ ಹಾಕಿ ಟೂರ್ನಿ: 16 ತಂಡಗಳ ಭಾಗಿ

ರಾಯಚೂರು,ಆ.26-

ರಾಯಚೂರು ಜಿಲ್ಲಾ ಹಾಕಿ ಅಸೋಸಿಯೇಷನ್‌ನ 25ನೇ ವಾರ್ಷಿಕೋತ್ಸವದ ಅಂಗವಾಗಿ, ಕರ್ನಾಟಕ ಸ್ಟೇಟ್ ಹಾಕಿ ಅಸೋಸಿಯೇಷನ್ ಬೆಂಗಳೂರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ದಿವ್ಯಾಂಗ ಪ್ಯಾರಾ ಅಸೋಸಿಯೇಷನ್ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಪ್ರಯುಕ್ತ ರಾಜ್ಯಮಟ್ಟದ ಹೊನಲು ಬೆಳಕಿನ 5-ಎ-ಸೈಡ್ ರಿಂಕ್ ಹಾಕಿ ಟೂರ್ನಿಯನ್ನು ಆ. 29 ರಂದು ಬೆ. 10.30 ಕ್ಕೆ ಆಯೋಜಿಸಲಾಗಿದೆ ಎಂದು ರಾಯಚೂರು ಜಿಲ್ಲಾ ಹಾಕಿ ಅಸೋಸಿಯೇಷನ್ ಅಧ್ಯಕ್ಷ ರವೀಂದ್ರ ಜಲ್ದಾರ್ ತಿಳಿಸಿದರು.



ನಗರದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಕಿ ಲೆಜೆಂಡ್ ಹಾಗೂ ಒಲಿಂಪಿಕ್ಸ್ ಮತ್ತು ವಿಶ್ವಕಪ್ ವಿಜೇತ ಮೇಜರ್ ಧ್ಯಾನ್‌ಚಂದ್ ಅವರ ಜನ್ಮದಿನದ ಅಂಗವಾಗಿ ಈ ಕ್ರೀಡಾಕೂಟವನ್ನು ಆಯೋಜಿಸಲಾಗುತ್ತಿದೆ. ಟೂರ್ನಿಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಒಟ್ಟು 16 ತಂಡಗಳು ನೋಂದಣಿ ಮಾಡಿಕೊಂಡಿವೆ.

ಮಹಾತ್ಮ ಗಾಂಧಿ ಕ್ರೀಡಾಂಗಣದ ಬಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಪಂದ್ಯಗಳು ನಡೆಯಲಿವೆ . ಟೂರ್ನಿಯ ಉದ್ಘಾಟನಾ ಸಮಾರಂಭದಲ್ಲಿ ಮಾಜಿ ಸಚಿವ ಹಾಗೂ ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಕುಮಾರ್ ಬಂಗಾರಪ್ಪ ಉದ್ಘಾಟಕರಾಗಿ ಭಾಗವಹಿಸಲಿದ್ದು,

ರಾಯಚೂರು ನಗರ ಶಾಸಕ ಡಾ. ಎಸ್. ಶಿವರಾಜ ಪಾಟೀಲ್ ಜ್ಯೋತಿ ಬೆಳಗಿಸಲಿದ್ದಾರೆ. ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ್, ಮಾಜಿ

3ನೇ ಪುಟ.....

ಸೆ.6ರವರೆಗೆ ಜಮಾಅತೆ ಇಸ್ಲಾಮಿ ಹಿಂದ್ ವತಿಯಿಂದ ಸೀರತ್ ಅಭಿಯಾನ: ಅಬ್ದುಲ್ ರೆಹಮಾನ್



ಮಾನ್ವಿ,ಆ.25-

ಪ್ರವಾದಿ ಮುಹಮ್ಮದ್(ಸ) ಅವರ ಸಂದೇಶಗಳನ್ನು ಕನ್ನಡ ಜನತೆಗೆ ಪರಿಚಯಿಸುವುದು, ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವುದು ಹಾಗೂ ಪರಸ್ಪರ ಬಾಂಧವ್ಯಗಳನ್ನು ಬಲಪಡಿಸುವ ಉದ್ದೇಶದಿಂದ ಮಾನ್ವಿ ತಾಲೂಕಿನಲ್ಲಿ ಜಮಾಅತೆ ಇಸ್ಲಾಮಿ ಹಿಂದ್ ವತಿಯಿಂದ ಆ.26ರಿಂದ ಸೆ.6ರವರೆಗೆ ಕ್ರಾಂತಿಯ ಜ್ಯೋತಿ - ಪ್ರವಾದಿ ಮುಹಮ್ಮದ್(ಸ) ಎಂಬ ಹೆಸರಿನಲ್ಲಿ ಸೀರತ್ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಅಧ್ಯಕ್ಷ ಅಬ್ದುಲ್ ರೆಹಮಾನ್ ತಿಳಿಸಿದರು.

ಪಟ್ಟಣದ ಕುಬಾ ಮಸ್ಜಿದ್ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಭಿಯಾನದ ಕಾರ್ಯಕ್ರಮಗಳ ವಿವರ ನೀಡಿದರು.

ಆ.26ರಂದು ವಿವಿಧ ಸಮುದಾಯಗಳ ಮುಖಂಡರ ಭೇಟಿ, ಆ.27 ಮತ್ತು ಆ.28ರಂದು ಕುಬಾ ಮಸ್ಜಿದ್ ಸಭಾಂಗಣದಲ್ಲಿ ಸಮುದಾಯದ ಮುಖಂಡರೊಂದಿಗೆ ಸಭೆ ಹಾಗೂ ವಿಚಾರ ವಿನಿಮಯ ಕಾರ್ಯಕ್ರಮ ಹಾಗೂ ಉಮರ್ ಮತ್ತು ಅಕ್ಬರಿ ಮಸ್ಜಿದ್‌ಗಳಲ್ಲಿ ಹಿರಿಯ ಸಾಹಿತಿ ಯೋಗೇಶ್ ಮಾಸ್ಟರ್ ರಚಿಸಿದ 'ಮಾನವ ಮನದೊಡೆಯ ಪ್ರವಾದಿ ಮುಹಮ್ಮದ್(ಸ)' ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ.

ಆ.29ರಂದು ಪಟ್ಟಣದ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಹಣ್ಣುಗಳ

3ನೇ ಪುಟ.....

ಜಿಲ್ಲಾಡಳಿತದಿಂದ ಆಗಸ್ಟ್ 28ರಂದು ನೂಲಿಯ ಚಂದಯ್ಯ ಜಯಂತಿ

ರಾಯಚೂರು ಆಗಸ್ಟ್ 25

ರಾಯಚೂರಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನೂಲಿಯ ಚಂದಯ್ಯ ಜಯಂತಿ ಕಾರ್ಯಕ್ರಮವನ್ನು ಆಗಸ್ಟ್ 28ರ ಬೆಳಿಗ್ಗೆ 11ಕ್ಕೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಅಜಯ್ ಧರ್ಮಸಿಂಗ್ ಅವರು ಉದ್ಘಾಟನೆ ನೆರವೇರಿಸುವರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ ಎಸ್.ತಂಗಡಗಿ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ಎಸ್.ಸಿ, ಎಸ್.ಟಿ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ ಜಿ. ಅವರು ಘನ ಉಪಸ್ಥಿತಿ ವಹಿಸುವರು.

ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ವಿಧಾನ ಪರಿಷತ್

3ನೇ ಪುಟ.....

ಋತುಮಾನ ಜ್ವರದ ಪ್ರಕರಣಗಳ ಕುರಿತು ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ವಹಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಮನವಿ

ರಾಯಚೂರು ಆ.25-

ರಾಜ್ಯದಲ್ಲಿ ಬದಲಾಗುತ್ತಿರುವ ಹವಾಮಾನದ ಹಿನ್ನೆಲೆಯಲ್ಲಿ ಋತುಮಾನ ಜ್ವರದ (ಸಾಂಕ್ರಾಮಿಕ ಇನ್‌ಫ್ಲುಯೆಂಜಾ) ಪ್ರಕರಣಗಳು ಹೆಚ್ಚಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ರಾಯಚೂರು ಜಿಲ್ಲಾ ಆರೋಗ್ಯ ಕಲ್ಯಾಣ ಇಲಾಖೆಯ ಅಧಿಕಾರಿಗಳು ಡಾ.ನಂದಿತಾ ಎಮ್.ಎನ್. ಅವರು ತಿಳಿಸಿದ್ದಾರೆ.

ಈ ಜ್ವರವು ಅತ್ಯಂತ ವೇಗವಾಗಿ ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಸಾಂಕ್ರಾಮಿಕ ರೋಗವಾಗಿದ್ದು, ಕೆಲವೊಮ್ಮೆ ತೀವ್ರ ಸ್ವರೂಪ ಪಡೆದುಕೊಂಡು ಗಂಭೀರ ಆರೋಗ್ಯ ಸಮಸ್ಯೆಗಳನ್ನು ಉಂಟು ಮಾಡುವ ಸಾಮರ್ಥ್ಯ ಹೊಂದಿದೆ ಎಂದು ಇಲಾಖೆ ಎಚ್ಚರಿಸಿದೆ. ಜ್ವರ ಪೀಡಿತರಲ್ಲಿ ಜ್ವರ, ಕೆಮ್ಮು, ಗಂಟಲು ನೋವು ಅಥವಾ ಗಂಟಲಿನಲ್ಲಿ ಊತ ಕಾಣಿಸಿಕೊಳ್ಳುವುದರ ಜೊತೆಗೆ ಮೈ-ಕೈ ನೋವು ಮತ್ತು ಉಸಿರಾಟಕ್ಕೆ ತೊಂದರೆಯಾಗುವಂತಹ ಪ್ರಮುಖ ಲಕ್ಷಣಗಳು ಗೋಚರಿಸುತ್ತವೆ.

ಜ್ವರ ಬಾಧಿತ ವ್ಯಕ್ತಿಗಳು ಬಹಿರಂಗವಾಗಿ ಕೆಮ್ಮಿದಾಗ ಅಥವಾ ಸೀನಿದಾಗ ಸಮೀಪ ಇರುವವರು ಉಸಿರಾಡುವುದರಿಂದ ಹಾಗೂ ವೈರಸ್ ಸೋಂಕಿತರ ಮೇಲ್ಮೈಗಳನ್ನು ಸ್ಪರ್ಶಿಸಿ ಅದೇ ಕೈಗಳಿಂದ ಕಣ್ಣು,



ಮೂಗು ಅಥವಾ ಬಾಯಿಯನ್ನು ಮುಟ್ಟಿಕೊಳ್ಳುವುದರಿಂದ ಈ ರೋಗವು ಅತ್ಯಂತ ಸುಲಭವಾಗಿ ಹರಡುತ್ತದೆ. ಈ ನಿಟ್ಟಿನಲ್ಲಿ ರೋಗ ಹರಡುವಿಕೆಯನ್ನು ತಡೆಗಟ್ಟಲು ಸಾರ್ವಜನಿಕರು ಕೆಮ್ಮುವಾಗ ಮತ್ತು ಸೀನುವಾಗ ಕರವಸ್ತ್ರದಿಂದ ಬಾಯಿ ಹಾಗೂ ಮೂಗನ್ನು ಕಡ್ಡಾಯವಾಗಿ ಮುಚ್ಚಿಕೊಳ್ಳಬೇಕು. ಮತ್ತು ಕೈಗಳನ್ನು ನಿಯಮಿತವಾಗಿ ಸೋಪು ಹಾಗೂ ಶುದ್ಧ ನೀರಿನಿಂದ ತೊಳೆದುಕೊಳ್ಳುವುದನ್ನು ರೂಢಿಸಿಕೊಳ್ಳಬೇಕು ಎಂದು ಇಲಾಖೆ ಸಲಹೆ ನೀಡಿದೆ.

ದೇಹದಲ್ಲಿ ನೀರಿನಂಶ ಕಡಿಮೆಯಾಗದಂತೆ ಹೆಚ್ಚಿನ ಪ್ರಮಾಣದ ದ್ರವಾಹಾರ ಹಾಗೂ ಕುದಿಸಿ ಆರಿಸಿದ ನೀರನ್ನು ಸೇವಿಸಬೇಕು. ಅನಾರೋಗ್ಯದಿಂದ ಬಳಲುತ್ತಿರುವ ವ್ಯಕ್ತಿಗಳಿಂದ ಸೂಕ್ತ ಅಂತರವನ್ನು ಕಾಯ್ದುಕೊಳ್ಳಬೇಕು. ರೋಗ ಲಕ್ಷಣವಿದ್ದಲ್ಲಿ ಜನದಟ್ಟಣೆ ಇರುವ ಪ್ರದೇಶಗಳಿಗೆ ಭೇಟಿ ನೀಡುವುದನ್ನು ಆದಷ್ಟು ಕಡಿಮೆ ಮಾಡಬೇಕು. ಇತರರು ಬಳಸಿದ ಬಟ್ಟೆ ಅಥವಾ ಕರವಸ್ತ್ರಗಳನ್ನು ಉಪಯೋಗಿಸಬಾರದು. ವೈದ್ಯರ ಸೂಕ್ತ ಸಲಹೆ ಅಥವಾ ಚೀಟಿ ಇಲ್ಲದೆ ಸ್ವಯಂ ಇಚ್ಛೆಯಂತೆ ಮಾತ್ರೆಗಳನ್ನು ಖರೀದಿಸಿ ಸೇವಿಸಬಾರದು ಎಂದು ಸೂಚಿಸಿದೆ.

ಜಿಲ್ಲೆಯಾದ್ಯಂತ ನಿಯಂತ್ರಣಕ್ಕಾಗಿ ಕ್ರಮ: ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯ, ಜಿಲ್ಲಾ ಮಟ್ಟದ ಎಲ್ಲಾ ಹಿರಿಯ ಆರೋಗ್ಯ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆಯನ್ನು ನಡೆಸಿದ್ದು, ಈ ಹಿನ್ನಲೆಯಲ್ಲಿ

3ನೇ ಪುಟ.....

ಅಂಗಾಂಗ ದಾನದ ಕುರಿತು ಜನರಲ್ಲಿ ಇನ್ನಷ್ಟು ಜಾಗೃತಿ ಅಗತ್ಯ: ಡಾ.ಮಂಜುನಾಥ ದೋಶೆಟ್ಟಿ

ಕಲಬುರಗಿ,ಆ.26-

ಅಂಗಾಂಗ ದಾನದ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಇನ್ನಷ್ಟು ಅರಿವು ಮೂಡಬೇಕಿದೆ. ಅಂಗಾಂಗಗಳ ಕೊರತೆಯಿಂದ ಹೃದಯ, ಯಕೃತ್ತು, ಮೂತ್ರಪಿಂಡ, ಮೇದೋಜೀರಕ ಗ್ರಂಥಿ, ಶ್ವಾಸಕೋಶ ಹಾಗೂ ಚರ್ಮ ಸೇರಿದಂತೆ ಜೀವ ಉಳಿಸುವ ಅಂಗಾಂಗಗಳ ತುರ್ತು ಅಗತ್ಯವಿರುವ ಅನೇಕ ರೋಗಿಗಳು ಜೀವ ಕಳೆದುಕೊಳ್ಳುವಂತಾಗಿದೆ ಎಂದು ಖ್ಯಾತ ಮೂತ್ರಪಿಂಡ ತಜ್ಞ ಹಾಗೂ ಅಂಗಾಂಗ ಕಸಿ ಪರಿಣಿತ ಡಾ. ಮಂಜುನಾಥ ದೋಶೆಟ್ಟಿ ವಿಷಾದಿಸಿದರು.

ನಗರದ ಶರಣಬಸವ ವಿಶ್ವವಿದ್ಯಾಲಯದಲ್ಲಿ ಜೀವನ ಆಧಾರ ಫೌಂಡೇಶನ್, ಚಿರಾಯು ಆಸ್ಪತ್ರೆ ಹಾಗೂ ಶರಣಬಸವ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ವಿಶ್ವ ಅಂಗಾಂಗ ದಾನಿಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಲಬುರಗಿಯಲ್ಲಿ ಈಗಾಗಲೇ ಹಲವು ಯಶಸ್ವಿ ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆ ಗಳನ್ನು ನಡೆಸಲಾಗಿದೆ. ಪ್ರತಿವರ್ಷ ಜೀವ ಉಳಿಸುವ ಅಂಗಾಂಗ ಕಸಿಗಾಗಿ ಕಾಯುತ್ತಿರುವ ಸಾವಿರಾರು ಗಂಭೀರ ಸ್ಥಿತಿಯ ರೋಗಿಗಳಿಗೆ ಸಕಾಲದಲ್ಲಿ ಅಂಗಾಂಗಗಳು ದೊರೆಯದೆ ಸಾವನ್ನಪ್ಪುವ ಪರಿಸ್ಥಿತಿ ಇದೆ ಎಂದು ಹೇಳಿದರು.



ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಗಳ ಅಂಗಾಂಗಗಳನ್ನು ದಾನ ಮಾಡುವ ಮೂಲಕ ಹೃದಯ, ಯಕೃತ್ತು, ಮೂತ್ರಪಿಂಡ, ಮೇದೋಜೀರಕ ಗ್ರಂಥಿ ಹಾಗೂ ಶ್ವಾಸಕೋಶ ಸೇರಿದಂತೆ ವಿವಿಧ ಅಂಗಾಂಗಗಳ ಕಸಿ ಅಗತ್ಯವಿರುವ ಹಲವು ರೋಗಿಗಳ ಜೀವ ಉಳಿಸಬಹುದು. ಈ ಕುರಿತು ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಡಾ. ದೋಶೆಟ್ಟಿ ತಿಳಿಸಿದರು.

ಗ್ರೀನ್ ಕಾರಿಡಾರ್ ವ್ಯವಸ್ಥೆ ಕಲ್ಪಿಸಿದ ಪೊಲೀಸರಿಗೆ ಸನ್ಮಾನ :

ವಿಜಯಪುರದಿಂದ ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಮೂತ್ರಪಿಂಡವನ್ನು ಕಲಬುರಗಿಗೆ ತಂದು, ಜೀವನ್ಮರಣದ ಹೋರಾಟದಲ್ಲಿದ್ದ ಮಹಿಳಾ ರೋಗಿಗೆ ಯಶಸ್ವಿಯಾಗಿ ಕಸಿ ಮಾಡಲು ಅನುಕೂಲವಾಗುವಂತೆ ಗ್ರೀನ್ ಕಾರಿಡಾರ್ ವ್ಯವಸ್ಥೆ ಕಲ್ಪಿಸಿದ ಪೊಲೀಸ್ ಸಿಬ್ಬಂದಿಯನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಕಲಬುರಗಿ ಸಂಚಾರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಶಕೀಲ್ ಅಂಗಡಿ, ಸಿಎಆರ್‌ನ ರಿಸರ್ವ್ ಪೊಲೀಸ್ ಇನ್‌ಸ್ಪೆಕ್ಟರ್ ಮಹಾದೇವ ಪಾಟೀಲ ಸೇರಿದಂತೆ ಮೂವರು ಪೊಲೀಸ್ ಸಿಬ್ಬಂದಿಯನ್ನು ಡಾ. ಮಂಜುನಾಥ ದೋಶೆಟ್ಟಿ, ಶರಣಬಸವ ವಿಶ್ವವಿದ್ಯಾಲಯದ ಅಧಿಕಾರಿಗಳು ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಗೌರವಿಸಿದರು.

ಅಂಗಾಂಗವನ್ನು ತ್ವರಿತವಾಗಿ ಸಾಗಿಸಲು ಗ್ರೀನ್ ಕಾರಿಡಾರ್ ವ್ಯವಸ್ಥೆ ಕಲ್ಪಿಸಿದ ಪೊಲೀಸ್ ಸಿಬ್ಬಂದಿಯ ಸೇವೆಯನ್ನು ಗುರುತಿಸಿ ಮುಖ್ಯಮಂತ್ರಿಗಳಿಂದ ನೀಡಲಾದ ಪ್ರಶಂಸನಾ ಪತ್ರ ಹಾಗೂ ಪ್ರಮಾಣಪತ್ರವನ್ನು ಇದೇ ಸಂದರ್ಭದಲ್ಲಿ ವಿತರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಅನಿಲಕುಮಾರ ಬಿಡವೆ ಮಾತನಾಡಿ, ಯುವಕರು ಅಂಗಾಂಗ ದಾನವನ್ನು ಜನಾಂದೋಲನವಾಗಿ ರೂಪಿಸಬೇಕು ಎಂದು ಕರೆ ನೀಡಿದರು.

ಯುವಕರು ತಮ್ಮೊಂದಿಗೆ ತಮ್ಮ ಪೋಷಕರನ್ನೂ ಅಂಗಾಂಗ ದಾನಕ್ಕೆ ನೋಂದಾಯಿಸಬೇಕು. ಅಂಗಾಂಗ ದಾನದ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸುವ ಅಭಿಯಾನ ಕೈಗೊಳ್ಳಬೇಕು. ಅಂಗಾಂಗ ದಾನ ಸುರಕ್ಷಿತವಾಗಿದ್ದು, ಇಂದಿನ ಸಮಾಜದ ಅಗತ್ಯವಾಗಿದೆ ಎಂದು ಹೇಳಿದರು.

ಮರಣದ ನಂತರ ಕಣ್ಣುಗಳನ್ನೂ ದಾನ ಮಾಡಬಹುದು. ಪ್ರತಿಯೊಬ್ಬರೂ ಅಂಗಾಂಗ ದಾನಿಗಳಾಗಿ ನೋಂದಾಯಿಸಿಕೊಳ್ಳುವ ಮೂಲಕ ತಮ್ಮ ಮರಣದ ನಂತರವೂ ಮತ್ತೊಬ್ಬರ ಬದುಕಿಗೆ ಬೆಳಕಾಗಬೇಕು ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವೆ ಡಾ. ಲಕ್ಷ್ಮೀ ಪಾಟೀಲ ಮಾಕಾ, ನಿರ್ದೇಶಕ ಪ್ರೊ. ವಿ.ಡಿ. ಮೈತ್ರಿ, ಮೌಲ್ಯಮಾಪನ ಕುಲಸಚಿವ ಡಾ. ಎಸ್.ಎಚ್. ಹೊನ್ನಳ್ಳಿ, ಸಂಶೋಧನಾ ಡೀನ್ ಡಾ. ಸುಜಾತಾ ಮಲ್ಲಾಪುರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಶರಣಪ್ಪ ಕ್ಯಾತನಾಳ, ಜಿಲ್ಲಾ ಕಣ್ಗಾವಲು ಅಧಿಕಾರಿ ಡಾ. ರಾಕೇಶ್ ಕಾಂಬಳೆ, ಬಸಂತಿ ಗುತ್ತೇದಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಿಶ್ವವಿದ್ಯಾಲಯದ ಡೀನ್ ಡಾ. ಶಿವಕುಮಾರ ಜವಳಿಗಿ ಸ್ವಾಗತಿಸಿದರು. ಪ್ರೊ.ನಿರುಪಮಾ ವಂದನಾರ್ಪಣೆ ಸಲ್ಲಿಸಿದರು. ಪ್ರೊ. ಶ್ರುತಿ ಹಂಚನಾಳ ಕಾರ್ಯಕ್ರಮ ನಿರೂಪಿಸಿದರು.

ಖರ್ಗೆ ಭಾಷಣ ಮಾಡಿದ ಸ್ಥಳ ಶುದ್ಧೀಕರಣ ಖಂಡಿಸಿ ಭಾಲ್ಕಿಯಲ್ಲಿ ಕಾಂಗ್ರೆಸ್ ಪ್ರತಿಭಟನೆ



ಭಾಲ್ಕಿ,ಆ.26-

ಎಐಸಿಸಿ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಉತ್ತರಾಖಂಡದಲ್ಲಿ ಭಾಷಣ ಮಾಡಿದ್ದ ಸ್ಥಳವನ್ನು ಗಂಗಾಜಲದಿಂದ ಶುದ್ಧೀಕರಿಸಿ, ಹೋಮ-ಹವನ ನಡೆಸಿರುವುದನ್ನು ಖಂಡಿಸಿ ಕಾಂಗ್ರೆಸ್ ಪಕ್ಷದ ವತಿಯಿಂದ ಸಂಸದ ಸಾಗರ್ ಖಂಡ್ರೆ ನೇತೃತ್ವದಲ್ಲಿ ಮಂಗಳವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು. ನಗರದ ತಾಲೂಕು ಕಾಂಗ್ರೆಸ್ ಕಚೇರಿಯಿಂದ ಆರಂಭಗೊಂಡ ಪ್ರತಿಭಟನಾ ಮೆರವಣಿಗೆ ಬಸವೇಶ್ವರ ವೃತ್ತ, ಮಹಾತ್ಮ ಗಾಂಧಿ ವೃತ್ತ ಹಾಗೂ ಅಂಬೇಡ್ಕರ್ ವೃತ್ತದ ಮೂಲಕ ಸಾಗಿತು. ಬಳಿಕ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ತಹಶೀಲ್ದಾರ್ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಿದರು.

ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ಧ್ವಜ ಹಿಡಿದು ಜಾತಿ ಹಾಗೂ ಮನುವಾದಿ ವ್ಯವಸ್ಥೆ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಸಂಸದ ಸಾಗರ್ ಖಂಡ್ರೆ, ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಸಾಮಾಜಿಕ ನ್ಯಾಯಕ್ಕಾಗಿ ನಿರಂತರವಾಗಿ ಧ್ವನಿ ಎತ್ತುತ್ತಿರುವ ಹಿರಿಯ ನಾಯಕರಾಗಿದ್ದಾರೆ. ಅವರನ್ನು ಅವಮಾನಿಸುವ ಉದ್ದೇಶದಿಂದ ನಡೆದಿರುವ ಈ ಕೃತ್ಯ ಅತ್ಯಂತ ಖಂಡನೀಯ. ಘಟನೆಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದರು.

ಜಾತಿ ಹಾಗೂ ಮನುವಾದಿ ಮನಸ್ಥಿತಿಯ ಇಂತಹ ಕೃತ್ಯಗಳಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ಸ್ಥಾನವಿಲ್ಲ. ಸಂವಿಧಾನ ಮತ್ತು ಸಾಮಾಜಿಕ ಸಮಾನತೆಯನ್ನು ಗೌರವಿಸುವ ಪ್ರತಿಯೊಬ್ಬರೂ ಇಂತಹ ಘಟನೆಗಳನ್ನು ಖಂಡಿಸಬೇಕು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ತಾಲೂಕು ಕಾಂಗ್ರೆಸ್ ಅಧ್ಯಕ್ಷ ಹಣಮಂತರಾವ್ ಚವ್ಹಾಣ, ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಶಿವರಾಜ್ ಹಾಸನಕರ್, ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ್ ವಂಕೆ, ಪ್ರಮುಖರಾದ ವಿಲಾಸ್ ಮೋರೆ ಹಾಗೂ ಪ್ರಶಾಂತ್ ಕೋಟಗಿರಾ ಸೇರಿದಂತೆ ತಾಲೂಕಿನ ವಿವಿಧ ಭಾಗಗಳ ಕಾಂಗ್ರೆಸ್ ಮುಖಂಡರು, ಪದಾಧಿಕಾರಿಗಳು ಭಾಗವಹಿಸಿದ್ದರು.

ಪಿಎಸಿಎಸ್ ಕಾರ್ಯದರ್ಶಿಗಳಿಗೆ ಜಿಲ್ಲಾ ಮಟ್ಟದ ವಿಶೇಷ ತರಬೇತಿ

ಕಲಬುರಗಿ,ಆ.26-

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪಿಎಸಿಎಸ್) ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಕಾರ್ಯದರ್ಶಿಗಳು ಸಹಕಾರ ಕ್ಷೇತ್ರದ ಇತ್ತೀಚಿನ ಬೆಳವಣಿಗೆಗಳು, ಲೆಕ್ಕಪತ್ರ ನಿರ್ವಹಣೆ ಹಾಗೂ ಕಾಯ್ದೆ ತಿದ್ದುಪಡಿಗಳ ಕುರಿತು ಸಮಗ್ರ ಜ್ಞಾನ ಹೊಂದಿರಬೇಕು ಎಂದು ಕಲಬುರಗಿ ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷೆ ಸುನಂದಾ ಬಿ. ಪಾಟೀಲ್ ಹೇಳಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕಲಬುರಗಿ ಜಿಲ್ಲಾ ಸಹಕಾರ ಒಕ್ಕೂಟ ಹಾಗೂ ಸಹಕಾರ ಇಲಾಖೆ ಸಹಯೋಗದಲ್ಲಿ ಕಲಬುರಗಿ, ಕಮಲಾಪುರ, ಜೇವರ್ಗಿ ಮತ್ತು ಯಡ್ರಾಮಿ ತಾಲ್ಲೂಕುಗಳ ಪಿಎಸಿಎಸ್ ಕಾರ್ಯದರ್ಶಿಗಳಿಗಾಗಿ ನಗರದ ಕೆಐಸಿಎಂ ತರಬೇತಿ ಸಂಸ್ಥೆಯಲ್ಲಿ ಮಂಗಳವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪಿಎಸಿಎಸ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಯಾವುದೇ ಸಂದೇಹ ಅಥವಾ ಸಮಸ್ಯೆಗಳಿದ್ದಲ್ಲಿ ತರಬೇತಿ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳಿಂದ ಅಗತ್ಯ ಮಾಹಿತಿ ಪಡೆದು ಪರಿಹರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕ ಮಲ್ಲಿಕಾರ್ಜುನ ಎಲಿಮನಿ ಮಾತನಾಡಿ, ಪಿಎಸಿಎಸ್‌ಗಳು ಕೇವಲ ಕೆಸಿಸಿ ಸಾಲ ಹಾಗೂ ಗೊಬ್ಬರ ವ್ಯವಹಾರಕ್ಕೆ ಸೀಮಿತವಾಗದೆ ವಿವಿಧ ರೀತಿಯ ವ್ಯವಹಾರಗಳನ್ನು ಅಳವಡಿಸಿಕೊಳ್ಳಬೇಕು. ಜಿಲ್ಲೆಯ ಎಲ್ಲ ಪಿಎಸಿಎಸ್‌ಗಳು ಸಿಎಸ್‌ಸಿ ಕೇಂದ್ರಗಳನ್ನು ಸ್ಥಾಪಿಸಿ ಸದಸ್ಯರು ಹಾಗೂ ಸಾರ್ವಜನಿಕರಿಗೆ ವಿವಿಧ ಸೇವೆಗಳನ್ನು ಒದಗಿಸುವತ್ತ ಗಮನಹರಿಸಬೇಕು ಎಂದರು.



ನಿರ್ದೇಶಕ ಮಹೇಶ ಧರಿ ಮಾತನಾಡಿ, ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಇತ್ತೀಚೆಗೆ ಜಾರಿಗೆ ಬಂದಿರುವ ಕಾಯ್ದೆ ತಿದ್ದುಪಡಿಗಳನ್ನು ಸಮರ್ಪಕವಾಗಿ ಅಳವಡಿಸಿಕೊಂಡು ನಿಯಮಾನುಸಾರ ಉತ್ತಮ ಆಡಳಿತ ನಡೆಸಬೇಕು ಎಂದು ತಿಳಿಸಿದರು.

ತರಬೇತಿ ಕಾರ್ಯಕ್ರಮದಲ್ಲಿ ಸಹಕಾರ ಸಂಘಗಳ ಲೆಕ್ಕಪತ್ರ ನಿರ್ವಹಣೆ, ಇತ್ತೀಚಿನ ಕಾಯ್ದೆ ತಿದ್ದುಪಡಿಗಳು ಹಾಗೂ ಅವುಗಳನ್ನು ಸಂಘಗಳ ಕಾರ್ಯಚಟುವಟಿಕೆಗಳಲ್ಲಿ ಅಳವಡಿಸಿಕೊಳ್ಳುವ ಕುರಿತು ಸಂಪನ್ಮೂಲ ವ್ಯಕ್ತಿಗಳು ಉಪನ್ಯಾಸ ನೀಡಿದರು. ಅಫಜಲಪುರ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಇಲಾಖೆಯ ಸಹಾಯಕ ನಿರ್ದೇಶಕ ಶರಣಬಸವ ಮಾಡೋಳೆ, ರಾಯಚೂರು ಕೃಷಿ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ರವೀಂದ್ರ ಪಾಟೀಲ್ ಹಾಗೂ ಕಲಬುರಗಿ ಸರ್ಕಾರಿ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಟಿ. ಗುರುಬಸಪ್ಪ ಅವರು ವಿವಿಧ ವಿಷಯಗಳ ಕುರಿತು ಮಾಹಿತಿ ನೀಡಿದರು.

ಜಿಲ್ಲಾ ಸಹಕಾರ ಒಕ್ಕೂಟದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಂಜುಳಾ ಎಸ್. ಬಿರಾದರ ಅವರು ಸಹಕಾರ ಶಿಕ್ಷಣ, ತರಬೇತಿ ಹಾಗೂ ಪ್ರಚಾರ ಕಾರ್ಯಗಳ ಯೋಜನೆಗಳು ಮತ್ತು ಒಕ್ಕೂಟದ ವಿವಿಧ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕಲಬುರಗಿ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಇಲಾಖೆಯ ಉಪನಿರ್ದೇಶಕ ಎಸ್. ಸಂದೀಪ ರೆಡ್ಡಿ, ಅಫಜಲಪುರ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಇಲಾಖೆಯ ಸಹಾಯಕ ನಿರ್ದೇಶಕ ಶರಣಬಸವ ಮಡೋಳೆ ಹಾಗೂ ಕೆಐಸಿಎಂ ಪ್ರಾಂಶುಪಾಲ ಅರುಣಕುಮಾರ ಹರಸೂರ ಉಪಸ್ಥಿತರಿದ್ದರು. ಜಿಲ್ಲಾ ಸಹಕಾರ ಒಕ್ಕೂಟದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಂಜುಳಾ ಎಸ್. ಬಿರಾದರ ಕಾರ್ಯಕ್ರಮ ನಿರೂಪಿಸಿ ಸ್ವಾಗತಿಸಿದರು. ಪ್ರಾಂಶುಪಾಲ ಅರುಣಕುಮಾರ ಹರಸೂರ ವಂದಿಸಿದರು.

ಜೇವರ್ಗಿ ಕ್ಷೇತ್ರದ ಕರಡು ಮತದಾರರ ಪಟ್ಟಿಯಲ್ಲಿ 2.15 ಲಕ್ಷ ಮತದಾರರು

ಜೇವರ್ಗಿ,ಆ.26-

ಜೇವರ್ಗಿ ವಿಧಾನಸಭಾ ಮತಕ್ಷೇತ್ರದ ವಿಶೇಷ ಸಮಗ್ರ ಪರಿಷ್ಕರಣೆ-2026ರ () ಪ್ರಕ್ರಿಯೆ ಪೂರ್ಣಗೊಂಡಿದ್ದು, ಕ್ಷೇತ್ರದ ಕರಡು ಮತದಾರರ ಪಟ್ಟಿಯಲ್ಲಿ ಒಟ್ಟು 2,15,846 ಮತದಾರರು ಇದ್ದಾರೆ ಎಂದು ಮತದಾರರ ನೋಂದಣಿ ಅಧಿಕಾರಿ ಮಾರುತಿ ಬ್ಯಾಕೋಡ್ ತಿಳಿಸಿದರು.

ಜೇವರ್ಗಿ ತಹಸೀಲ್ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಕ್ಷೇತ್ರದಲ್ಲಿ 279 ಮತಗಟ್ಟೆಗಳಿದ್ದು, 1,30,626 ಪುರುಷರು, 1,28,415 ಮಹಿಳೆಯರು ಹಾಗೂ 20 ಇತರೆ ಮತದಾರರು ಸೇರಿದಂತೆ ಒಟ್ಟು 2,59,061 ಮತದಾರರಿದ್ದರು. ಪರಿಷ್ಕರಣೆಯ ಬಳಿಕ ಮತಗಟ್ಟೆಗಳ ಸಂಖ್ಯೆ 285ಕ್ಕೆ ಏರಿಕೆಯಾಗಿದ್ದು, ಕರಡು ಪಟ್ಟಿಯಲ್ಲಿ 1,10,580 ಪುರುಷರು, 1,05,253 ಮಹಿಳೆಯರು ಹಾಗೂ 13 ಇತರೆ ಮತದಾರರು ಇದ್ದಾರೆ ಎಂದು ಹೇಳಿದರು.

ವಿಶೇಷ ಸಮಗ್ರ ಪರಿಷ್ಕರಣೆ-2026ರ ಕರಡು ಮತದಾರರ ಪಟ್ಟಿಯನ್ನು ಆಗಸ್ಟ್ 24ರಂದು ಎಲ್ಲ ಮತಗಟ್ಟೆಗಳು ಹಾಗೂ ತಹಸೀಲ್ ಕಚೇರಿಯಲ್ಲಿ ಪ್ರಕಟಿಸಲಾಗಿದೆ ಎಂದು ತಿಳಿಸಿದರು.

ಪರಿಷ್ಕರಣೆ ವೇಳೆ ಒಟ್ಟು 43,215 ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಈ ಪೈಕಿ 9,688 ಮಂದಿ ಮೃತಪಟ್ಟವರು, 2,271 ಮಂದಿ ಗೈರುಹಾಜರಾಗಿರುವವರು, 27,235 ಮಂದಿ ಶಾಶ್ವತವಾಗಿ ಸ್ಥಳಾಂತರಗೊಂಡವರು ಹಾಗೂ 3,903 ಮಂದಿ ದ್ವಿಪ್ರತಿ ಮತದಾರರ ಗುರುತಿನ ಚೀಟಿ ಹೊಂದಿರುವವರು ಎಂದು ಗುರುತಿಸಲಾಗಿದೆ. ಇನ್ನು 118 ಮತದಾರರ ಹೆಸರುಗಳನ್ನು ಇತರೆ ಕಾರಣಗಳಿಂದ ಕೈಬಿಡಲಾಗಿದೆ ಎಂದು ಮಾರುತಿ ಬ್ಯಾಕೋಡ್ ವಿವರಿಸಿದರು.



ಹೆಸರು ಬದಲಾವಣೆ, 2022ರ ಮತದಾರರ ಪಟ್ಟಿಯ ಮಾಹಿತಿ ಲಭ್ಯವಿಲ್ಲದಿರುವುದು ಸೇರಿದಂತೆ ವಿವಿಧ ಕಾರಣಗಳಿಂದ ಸುಮಾರು 8,122 ಮತದಾರರಿಗೆ ನೋಟಿಸ್ ಜಾರಿ ಮಾಡುವುದು ಬಾಕಿ ಇದೆ. ಅವರಿಗೆ ಮೂರು ಬಾರಿ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು. ಸೂಕ್ತ ಮಾಹಿತಿ ಹಾಗೂ ದಾಖಲೆಗಳನ್ನು ಸಲ್ಲಿಸುವವರ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ಉಳಿಸಲಾಗುವುದು. ಅಗತ್ಯ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ನಿಯಮಾನುಸಾರ ಹೆಸರು ಕೈಬಿಡಲಾಗುವುದು ಎಂದು ಹೇಳಿದರು.

ಸೆ.23ರವರೆಗೆ ಹಕ್ಕುಆಕ್ಷೇಪಣೆ ಸಲ್ಲಿಕೆಗೆ ಅವಕಾಶ :

ಆಗಸ್ಟ್ 24ರಿಂದ ಸೆಪ್ಟೆಂಬರ್ 23ರವರೆಗೆ ಮತದಾರರು ಕರಡು ಪಟ್ಟಿಗೆ ಸಂಬಂಧಿಸಿದಂತೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಸೆಪ್ಟೆಂಬರ್ 24ರಿಂದ ಅಕ್ಟೋಬರ್ 22ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳ ವಿಚಾರಣೆ ನಡೆಯಲಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಾಗೂ ಪಟ್ಟಣ ಪ್ರದೇಶದಲ್ಲಿ ತಹಸೀಲ್ ಕಚೇರಿ, ಪುರಸಭೆ ಮತ್ತು ಇತರೆ ಸರ್ಕಾರಿ ಕಟ್ಟಡಗಳಲ್ಲಿ ವಿಚಾರಣೆಗೆ ಸ್ಥಳಗಳನ್ನು ಗುರುತಿಸಲಾಗಿದೆ. ಮತದಾರರ ವಿಚಾರಣೆ ನಡೆಸಲು ತಾಲೂಕು ಮಟ್ಟದಲ್ಲಿ 8 ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದರು.

ಸ್ವೀಕೃತವಾಗುವ ಎಲ್ಲ ಹಕ್ಕು ಮತ್ತು ಆಕ್ಷೇಪಣೆಗಳ ಅರ್ಜಿಗಳನ್ನು ಪರಿಶೀಲಿಸಿ ವಿಲೇವಾರಿ ಮಾಡಿದ ಬಳಿಕ ಅಕ್ಟೋಬರ್ 27ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದು ಮಾರುತಿ ಬ್ಯಾಕೋಡ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜೇವರ್ಗಿ ತಹಸೀಲ್ದಾರ್ ಅಂಜುಮಾ ತಬಸ್ಸುಮ್ ಹಾಗೂ ಯಡ್ರಾಮಿ ತಹಸೀಲ್ದಾರ್ ಯಲ್ಲಪ್ಪ ಸುಭೇದಾರ್ ಉಪಸ್ಥಿತರಿದ್ದರು.

ಕುಖ್ಯಾತ ಮನೆಗಳ್ಳನ ಬಂಧನ: 13.40 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ಬೆಳ್ಳಿ ವಶ



ಕಲಬುರಗಿ,ಆ.26-

ಸ್ಟೇಷನ್ ಬಜಾರ್ ಪೊಲೀಸರು ಕಾರ್ಯಾಚರಣೆ ನಡೆಸಿ ಕುಖ್ಯಾತ ಮನೆಗಳ್ಳನೊಬ್ಬನನ್ನು ಬಂಧಿಸಿದ್ದು, ಆತನಿಂದ ನಾಲ್ಕು ಮನೆ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ 13.40 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ, ಬಂಧಿತನನ್ನು ತೆಲಂಗಾಣದ ಹೈದರಾಬಾದ್‌ನ ನಾಮಪಲ್ಲಿಯ ಹಜ್ ಹೌಸ್ ಸಮೀಪದ ನಿವಾಸಿ ಮಹ್ಮದ್ ಮುಜಾಹಿದ್ ಅಲಿಯಾಸ್ ಜಾವೀದ್ (32) ಎಂದು ಗುರುತಿಸಲಾಗಿದೆ ಎಂದು ತಿಳಿಸಿದರು.

ಮನೆಗೆ ಬೀಗ ಹಾಕಿ ತೆರಳಿದ್ದಾಗ ಕಳ್ಳತನ :

ಜೀವನ ಪ್ರಕಾಶ ಶಾಲೆಯ ಹಿಂಭಾಗದ ಹಳೆ ಜೇವರ್ಗಿ ರಸ್ತೆಯ ನಿವಾಸಿ ಶಿವರಾಜ ಅವಂಟಿ ಅವರು ಕುಟುಂಬ ಸಮೇತ ಬಾಗಲಕೋಟೆಗೆ ತೆರಳಿದ್ದರು. ಜನವರಿ 15ರಂದು ಬೆಳಿಗ್ಗೆ 10 ಗಂಟೆಗೆ ಮನೆಗೆ ಬೀಗ ಹಾಕಿ ತೆರಳಿದ್ದ ಅವರು, ಜನವರಿ 21ರಂದು ಮಧ್ಯಾಹ್ನ ವಾಪಸ್ ಬಂದಾಗ ಮನೆಯ ಬಾಗಿಲಿನ ಕೀಲಿ ಮುರಿದಿರುವುದು ಕಂಡುಬಂದಿತ್ತು.

ಮನೆಯಲ್ಲಿದ್ದ 5 ಗ್ರಾಂ ಚಿನ್ನದ ಉಂಗುರ, ತಲಾ 3 ಗ್ರಾಂ ತೂಕದ ಎರಡು ಸುತ್ತುಂಗುರಗಳು ಹಾಗೂ 16 ಸಾವಿರ ರೂ. ನಗದು ಕಳ್ಳತನವಾಗಿತ್ತು. ಈ ಕುರಿತು ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ರಕರಣದ ತನಿಖೆಗಾಗಿ ರಚಿಸಲಾಗಿದ್ದ ವಿಶೇಷ ತಂಡವು ಖಚಿತ ಮಾಹಿತಿ ಆಧರಿಸಿ ಮಹ್ಮದ್ ಮುಜಾಹಿದ್ ಅಲಿಯಾಸ್ ಜಾವೀದ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಸ್ಟೇಷನ್ ಬಜಾರ್ ಠಾಣೆಯ ಎರಡು ಹಳೆಯ ಪ್ರಕರಣಗಳು ಸೇರಿದಂತೆ ಒಟ್ಟು ನಾಲ್ಕು ಮನೆ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದು ಬೆಳಕಿಗೆ ಬಂದಿದೆ ಎಂದು ಪೊಲೀಸ್ ಆಯುಕ್ತರು ತಿಳಿಸಿದರು.

ಬಂಧಿತನಿಂದ ಸ್ಟೇಷನ್ ಬಜಾರ್ ಠಾಣೆಯ ಗುನ್ನೆ ನಂ. 171/2025, 175/2025 ಹಾಗೂ 12/2026 ಮತ್ತು ಚೌಕ್ ಪೊಲೀಸ್ ಠಾಣೆಯ ಗುನ್ನೆ ನಂ. 110/2026ಕ್ಕೆ ಸಂಬಂಧಿಸಿದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಒಟ್ಟು 85 ಗ್ರಾಂ ಚಿನ್ನಾಭರಣ ಹಾಗೂ 260 ಗ್ರಾಂ ಬೆಳ್ಳಿ ಆಭರಣ, 13.40 ಲಕ್ಷ ರೂ. ಮೌಲ್ಯದ ಸ್ವತ್ತನ್ನು ಜಪ್ತಿ ಮಾಡಲಾಗಿದೆ. ಆರೋಪಿಯ ವಿರುದ್ಧ ಕಾನೂನು ಕ್ರಮ ಕೈಗೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಡಾ. ಶರಣಪ್ಪ ಎಸ್.ಡಿ. ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಡಿಸಿಪಿ ಶಾಲೂ ಹಾಗೂ ಸ್ಟೇಷನ್ ಬಜಾರ್ ಠಾಣೆಯ ಪಿಐ ಜಿ.ಎಂ.ಪಾಟೀಲ ಉಪಸ್ಥಿತರಿದ್ದರು.

ಶಾಸಕರು ಕ್ಷೇತ್ರದ ರೈತರ ಸಮಸ್ಯೆ ಪರಿಹರಿಸಲಿ: ದತ್ತಾತ್ರೇಯ ಪಾಟೀಲ ರೇವೂರ

ಕಲಬುರಗಿ,ಆ.26-

ರಾಜ್ಯದ ರೈತರ ಬೆಳೆಹಾನಿ ಕುರಿತು ಮಳೆಗಾಲದ ಅಧಿವೇಶನದಲ್ಲಿ ಚರ್ಚಿಸಲು ವಿರೋಧ ಪಕ್ಷದವರಿಗೆ ಮನವಿ ಮಾಡಿರುವ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ ಅವರ ನಡೆ ರೈತಪರ ಕಾಳಜಿಗಿಂತ ರಾಜಕೀಯ ಭೂಟಾಟಿಕೆಯಂತೆ ಕಾಣುತ್ತಿದೆ ಎಂದು ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಟೀಕಿಸಿದರು.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ರೈತರ ಬಗ್ಗೆ ಕಾಳಜಿ ವ್ಯಕ್ತಪಡಿಸುವ ಶಾಸಕರಿಗೆ ತಮ್ಮ ಕ್ಷೇತ್ರದ ರೈತರ ಸಮಸ್ಯೆಗಳ ಬಗ್ಗೆ ಏಕೆ ಕಾಳಜಿ ಇಲ್ಲ ಎಂದು ಪ್ರಶ್ನಿಸಿದರು.

ರಾಜ್ಯ ಹಾಗೂ ಕಲಬುರಗಿ ಜಿಲ್ಲೆಯಲ್ಲಿ ರೈತರು ಬರಗಾಲ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕಳೆದ ವರ್ಷದ ಬೆಳೆ ವಿಮೆ ಹಣವೇ ಅನೇಕ ರೈತರಿಗೆ ಸಮರ್ಪಕವಾಗಿ ತಲುಪಿಲ್ಲ. ಕ್ಷೇತ್ರದ ರೈತರಿಗೆ ಸರ್ಕಾರದಿಂದ ಯಾವ ರೀತಿಯ ನೆರವು ದೊರಕುವಂತೆ ಶಾಸಕರು ಕ್ರಮ ಕೈಗೊಂಡಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು.

ತಮ್ಮ ಅವಧಿಯಲ್ಲಿ ಕಲಬುರಗಿ ದಕ್ಷಿಣ ಕ್ಷೇತ್ರದ ಬಡ ರೈತರಿಗೆ ಗಂಗಾ ಕಲ್ಯಾಣ ಯೋಜನೆಯಡಿ ಎಷ್ಟು ಕೊಳವೆಬಾವಿಗಳನ್ನು ಕೊರೆಸಿ, ಎಷ್ಟು ರೈತರಿಗೆ ಮೋಟಾರ್ ಅಳವಡಿಸಿ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ ಎಂಬುದನ್ನು ಶಾಸಕರು ಬಹಿರಂಗಪಡಿಸಬೇಕು ಎಂದು ರೇವೂರ ಒತ್ತಾಯಿಸಿದರು.



ತಮ್ಮ ಸರ್ಕಾರದ ಅವಧಿಯಲ್ಲಿ ಕ್ಷೇತ್ರದ ರೈತರ ಅನುಕೂಲಕ್ಕಾಗಿ ಬೆಣ್ಣೆತೊರಾ ಬ್ಯಾರೇಜ್‌ನಿಂದ ವಿವಿಧ ಗ್ರಾಮಗಳ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕೈಗೆತ್ತಿಕೊಳ್ಳಲಾಗಿತ್ತು. ಸುಮಾರು 200 ಕೋಟಿ ರೂ. ಅನುದಾನದಲ್ಲಿ ಆರಂಭವಾದ ಈ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಕಾಮಗಾರಿ ವಿಳಂಬವಾಗಿರುವುದಕ್ಕೆ ಕಾರಣವೇನು ಎಂಬುದನ್ನು ಶಾಸಕರು ಕ್ಷೇತ್ರದ ರೈತರಿಗೆ ತಿಳಿಸಬೇಕು ಎಂದು ಹೇಳಿದರು.

ದರಿಯಾಪುರ ಕೋಟನೂರ ಪ್ರದೇಶದಲ್ಲಿ ಅಟಲ್‌ಜಿ ಲೇಔಟ್ ನಿರ್ಮಾಣಕ್ಕಾಗಿ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಭೂಸ್ವಾಧೀನಪಡಿಸಿಕೊಂಡಿರುವ ರೈತರ ಜಮೀನಿಗೆ ಸರ್ಕಾರದಿಂದ ಇದುವರೆಗೆ ಎಷ್ಟು ಪರಿಹಾರ ನೀಡಲಾಗಿದೆ ಎಂಬುದನ್ನೂ ಶಾಸಕರು ಸ್ಪಷ್ಟಪಡಿಸಬೇಕು ಎಂದು ರೇವೂರ ಆಗ್ರಹಿಸಿದರು.

ಲಭ್ಯವಿರುವ ಸರ್ಕಾರಿ ಮಾಹಿತಿಯ ಪ್ರಕಾರ ಸುಮಾರು 26 ರೈತರಿಂದ 150 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಅವರಿಗೆ ಸುಮಾರು 293 ಕೋಟಿ ರೂ. ಪರಿಹಾರ ನೀಡಬೇಕಿದೆ. ಈ ಪೈಕಿ ಇದುವರೆಗೆ ಎಷ್ಟು ಮೊತ್ತವನ್ನು ಪಾವತಿಸಲಾಗಿದೆ ಎಂಬುದನ್ನು ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಜಪ್ತಿಗೂ ಆದೇಶವಾಗಿರುವುದು ತಮ್ಮ ಗಮನಕ್ಕೆ ಬಂದಿದೆ ಎಂದು ಅವರು ಹೇಳಿದರು.

ಕ್ಷೇತ್ರದ ರೈತರು ಕಳೆದುಕೊಂಡ ಜಮೀನಿಗೆ ಸೂಕ್ತ ಪರಿಹಾರ ದೊರಕಿಸುವಲ್ಲಿ ವಿಫಲರಾಗಿರುವ ಶಾಸಕರು ಸದನದಲ್ಲಿ ರಾಜ್ಯದ ರೈತರ ಬಗ್ಗೆ ಕಾಳಜಿ ವ್ಯಕ್ತಪಡಿಸುತ್ತಿರುವುದು ಹಾಸ್ಯಾಸ್ಪದವಾಗಿದೆ ಎಂದು ರೇವೂರ ವ್ಯಂಗ್ಯವಾಡಿದರು.

ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ನಗರೋತ್ಥಾನ ಯೋಜನೆಯಡಿ ವಿವಿಧ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಸುಮಾರು 9 ತಿಂಗಳು ಕಳೆದರೂ ಕಾಮಗಾರಿಗಳು ಆರಂಭವಾಗಿಲ್ಲ. ಕಾಮಗಾರಿಗಳು ಆರಂಭವಾಗದಿರುವುದಕ್ಕೆ ಕಾರಣವೇನು ಎಂಬುದನ್ನು ಶಾಸಕರು ಹಾಗೂ ಸಂಬಂಧಿಸಿದ ಅಧಿಕಾರಿಗಳು ಸ್ಪಷ್ಟಪಡಿಸಬೇಕು ಎಂದು ಅವರು ಆಗ್ರಹಿಸಿದರು.

ರೈತರ ಹಾಗೂ ನಗರದ ಜನರ ಸಮಸ್ಯೆಗಳನ್ನು ಮೊದಲು ಪರಿಹರಿಸುವತ್ತ ಶಾಸಕರು ಗಮನಹರಿಸಬೇಕು. ಕೇವಲ ಸಾಮಾಜಿಕ ಜಾಲತಾಣಗಳಲ್ಲಿ ರೈತಪರ ಹೇಳಿಕೆ ನೀಡುವುದರಿಂದ ಸಮಸ್ಯೆಗಳು ಪರಿಹಾರವಾಗುವುದಿಲ್ಲ ಎಂದು ದತ್ತಾತ್ರೇಯ ಪಾಟೀಲ ರೇವೂರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವಿಶಾಲ ದರ್ಗಿ, ದಯಾಘನ್ ಧಾರವಾಡಕರ್, ರಾಜು ವಾಡೇಕರ್ ಶಿವಯೋಗಿ ನಾಗನಹಳ್ಳಿ, ಅವಿನಾಶ್ ಕುಲಕರ್ಣಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಸಿಂಧನೂರಿನಲ್ಲಿ ಅದ್ದೂರಿಯಾಗಿ ನಡೆದ ಮಿಲಾದುನ್ನಬಿ ಆಚರಣೆ; ಸ್ತಬ್ಧ ಚಿತ್ರಗಳ ಭವ್ಯ ಮೆರವಣಿಗೆ

ನಗರದ ಮಹಿಬೂಬಿಯಾ ಕಾಲೋನಿಯ ನೂರಾನಿ ಮಸೀದಿಯಲ್ಲಿ ಹಸಿರು ಧ್ವಜಸ್ತಂಭಕ್ಕೆ ರಾಜಕೀಯ ಪಕ್ಷಗಳ ಮುಖಂಡರು ಹೂವು ಮುಡಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯು ನಗರದ ಪ್ರಮುಖ ವೃತ್ತಗಳು ಹಾಗೂ ರಸ್ತೆಗಳಲ್ಲಿ ಸಂಚರಿಸಿ, ಕಿತ್ತೂರು ರಾಣಿ ಚೆನ್ನಮ್ಮ ವೃತ್ತದ ಮೂಲಕ ಕೋಟೆ ಪ್ರದೇಶದ ಕಿಲ್ಲಾ ಮಸೀದಿಯನ್ನು ತಲುಪಿತು. ಮೆರವಣಿಗೆಯಲ್ಲಿ ಮಕ್ಕಾಮದೀನಾ, ಅಲ್ಲಾಹು ಹೆಸರಿನ ಸ್ತಬ್ಧ ಚಿತ್ರಗಳನ್ನು ಭವ್ಯವಾಗಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು.

ಗಮನಸೆಳೆದ ಕೇಸರಿ, ಬಿಳಿ, ಹಸಿರು ಬಣ್ಣದ ಅಲ್ಲಾಹು ಸ್ತಬ್ಧ ಚಿತ್ರ...

ನಗರದ ಜನತಾ ಕಾಲೋನಿಯ ಯುವಕರು ತಯಾರಿಸಿದ್ದ ಕೇಸರಿ, ಬಿಳಿ ಹಾಗೂ ಹಸಿರು ರಾಷ್ಟ್ರಧ್ವಜದ ಬಣ್ಣದ ಅಲ್ಲಾಹು ಪದದ ಸ್ತಬ್ಧ ಚಿತ್ರ ಮೆರವಣಿಗೆಯಲ್ಲಿ ಗಮನಸೆಳೆಯಿತು. ದೇಶಪ್ರೇಮದ ಸಂದೇಶ ಸಾರುವ ಸ್ತಬ್ಧ ಚಿತ್ರ ಮೆರವಣಿಗೆಯ ಪ್ರಮುಖ ಆಕರ್ಷಣೆಯಾಗಿತ್ತು.

ಲಿಂಗಸುಗೂರು ಕೊಲೆ ಪ್ರಕರಣ: ಸಂತ್ರಸ್ತ ಕುಟುಂಬಕ್ಕೆ ಅಂಜುಮನ್ ಸಮಿತಿಯಿಂದ ಸಾಂತ್ವನ, ನೆರವು

ನ್ಯಾಯ ಸಿಗುವವರೆಗೆ ಸಂತ್ರಸ್ತ ಕುಟುಂಬಕ್ಕೆ ಧೈರ್ಯ ತುಂಬುವ ಕೆಲಸ ಮಾಡುತ್ತೇವೆ ಎಂದು ಅಂಜುಮನ್ ಸಮಿತಿ ಪದಾಧಿಕಾರಿಗಳು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಅಂಜುಮನ್-ಎ-ಮುಸ್ಲಿಮೀನ್ ಲಿಂಗಸುಗೂರು ತಾಲೂಕು ಕಮಿಟಿಯ ಅಧ್ಯಕ್ಷ ಹುಸೇನ್ ಭಾಷಾ, ಉಪಾಧ್ಯಕ್ಷ ಮುಸ್ತಫಾ, ಅಂಜುಮನ್ ಕಮಿಟಿಯ ಸದಸ್ಯರಾದ ವಸೀಮ್ ಭಾಯಿ, ಅಲ್ಲಾಸಾಬ್, ಅಮೀನ್ ಭಾಯಿ, ಉಬೆದ್ ಖುರೇಶಿ, ಅಲ್ಲಾಬಕ್ಷ, ಸಾಬೀರ್ ಖುರೇಶಿ, ಸಿಕಂದರ್ ಮನಿಯಾರ್, ರಹೇಮಾನ್, ಸಲೀಂ, ಅಕ್ಬರ್, ಮಹೇಬೂಬ್, ಮೊಹಮ್ಮದ್, ಅಜ್ಮೀರ್, ಸದ್ದಾಂ, ಸಾದಿಕ್, ಉಮರ್, ವಸೀಮ್ ಅಕ್ರಂ, ಅಬ್ಬಾಸ್, ಹಜರತ್, ಉಮರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ರಾಯಚೂರಿನಲ್ಲಿ ರಾಜ್ಯಮಟ್ಟದ ರಿಂಕ್ ಹಾಕಿ ಟೂರ್ನಿ: 16 ತಂಡಗಳ ಭಾಗಿ

ಶಾಸಕ ಎ. ಪಾಪಾರೆಡ್ಡಿ, ವಿಧಾನ ಪರಿಷತ್ ಸದಸ್ಯ ಎ. ವಸಂತಕುಮಾರ, ಮಾಜಿ ಸಂಸದ ಬಿ.ವಿ. ನಾಯಕ್ ಹಾಗೂ ಆರ್‌ಡಿಎ ಅಧ್ಯಕ್ಷ ರಾಜಶೇಖರ ರಾಮಸ್ವಾಮಿ ಸೇರಿದಂತೆ ಹಲವು ಗಣ್ಯರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಸಮಾರೋಪ ಸಮಾರಂಭದಲ್ಲಿ ಮಾಜಿ ಸಚಿವ ಎನ್.ಎಸ್. ಬೋಸರಾಜು, ರಾಯಚೂರು ಸಂಸದ ಜಿ. ಕುಮಾರ ನಾಯಕ, ಮಾಜಿ ಸಚಿವ ಕೆ. ಶಿವನಗೌಡ ನಾಯಕ, ಮಾಜಿ ಶಾಸಕ ತಿಪ್ಪರಾಜು ಹವಾಲ್ದಾರ್, ಕಾಂಗ್ರೆಸ್ ಮುಖಂಡ ರವಿ ಪಾಟೀಲ್,

ಜೆಡಿಎಸ್ ಮುಖಂಡ ಬಸವರಾಜ ನಾಡಗೌಡ ಹಾಗೂ ನಿವೃತ್ತ ಜಿಲ್ಲಾ ಅಧೀಕ್ಷಕ ಜಯಪ್ರಕಾಶರೆಡ್ಡಿ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ. ವಿಜೇತ ತಂಡಗಳಿಗೆ ಪ್ರಶಸ್ತಿ ವಿತರಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಹನುಮ ಂತಪ್ಪ, ರಾಜಶೇಖರ ಪಾಟೀಲ್, ಮುತ್ತುರಾಜ, ಮೃತ್ಯುಂಜಯ ಹಾಗೂ ಮಂಜುನಾಥ ಸ್ವಾಮಿ ಉಪಸ್ಥಿತರಿದ್ದರು.

ಸೀರತ್ ಅಭಿಯಾನ: ಅಬ್ದುಲ್ ರೆಹಮಾನ್

ವಿತರಣೆ, ಆ.30ರಿಂದ ಸೆ.3ರವರೆಗೆ ಗ್ರಾಮೀಣ ಭಾಗ ಹಾಗೂ ಪಟ್ಟಣದಲ್ಲಿ ಸೀರತ್ ಸೌಹಾರ್ದ ಕಾರ್ಯಕ್ರಮಗಳು ನಡೆಯಲಿವೆ.

ಸೆ.4ರಂದು ಪಟ್ಟಣದ ಈದ್ಗಾ ಶಾದಿ ಮಹಲ್‌ನಲ್ಲಿ ಹಿರಿಯ ಸಾಹಿತಿ ಅಬ್ದುಸ್ಸಲಾಮ್ ಪುತ್ತಿಗೆ ಅವರು ರಚಿಸಿದ 'ಸಮಗ್ರ ಕ್ರಾಂತಿಯ ಜ್ಯೋತಿ ಬೆಳಗಿದ ಪೈಗಂಬರ್ ಮುಹಮ್ಮದ್(ಸ)' ಪುಸ್ತಕವನ್ನು ಹಿರಿಯ ವೈದ್ಯ ಡಾ. ಬಸವಪ್ರಭು ಪಾಟೀಲ್ ಬಿಡುಗಡೆಗೊಳಿಸ ಲಿದ್ದಾರೆ. ನಂತರ ವಿಚಾರಗೋಷ್ಠಿ ನಡೆಯಲಿದೆ.

ಸೆ.6ರಂದು ಮಹಿಳಾ ವಿಭಾಗದ ಸೀರತ್ ಕಾರ್ಯಕ್ರಮ ಮತ್ತು ವಸ್ತು ಪ್ರದರ್ಶನದಲ್ಲಿ ಪ್ರವಾದಿ ಮುಹಮ್ಮದ್(ಸ) ಅವರ ಜೀವನ ಹಾಗೂ ಸಂದೇಶಗಳ ಭಿತ್ತಿಪತ್ರಗಳ ಪ್ರದರ್ಶನ, ಕಾಲೇಜುಗಳಲ್ಲಿ ಪ್ರಬಂಧ ಸ್ಪರ್ಧೆ ಹಾಗೂ ಸೌಹಾರ್ದ ಸಂದೇಶದೊಂದಿಗೆ ರ್‍ಯಾಲಿಗಳು ನಡೆಯಲಿವೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಸೀರತ್ ಅಭಿಯಾನದ ಭಿತ್ತಿಪತ್ರಗಳನ್ನು ಜಮಾಅತೆ ಇಸ್ಲಾಮಿ ಹಿಂದ್ ರಾಯಚೂರು ಜಿಲ್ಲಾ ಸಂಚಾಲಕ ಅಬ್ದುಲ್ ಕರೀಂ ಖಾನ್ ಸಾಬ್ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಮಹಿಳಾ ವಿಭಾಗದ ಸಂಚಾಲಕಿ ಸೈಯದಾ ನುಸ್ರತ್ ಜಹಾ, ಜಿಲ್ಲಾ ಉಪಾಧ್ಯಕ್ಷ ಎಂ.ಎ.ಎಮ್.ಮುನೀಮ್, ಸದಸ್ಯರಾದ ಖುಬೇದಾ ಬೇಗಂ, ಮುಹಮ್ಮದ್ ದಾವೂದ್ ಸಿದ್ದಿಕಿ, ಶೇಖ್ ಫರೀದ್ ಉಮ್ರಿ, ಉಮರ್ ಫಾರೂಖ್ ದೇವರಮನಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಜಿಲ್ಲಾಡಳಿತದಿಂದ ಆಗಸ್ಟ್ 28ರಂದು ನೂಲಿಯ ಚಂದಯ್ಯ ಜಯಂತಿ

ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎನ್.ಎಸ್.ಬೋಸರಾಜು, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಎಸ್.ಎಸ್.ನಕುಲ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಬಾಗಿಯಾಗಲಿದ್ದಾರೆ.

ನೂಲಿಯ ಚಂದಯ್ಯ ಜಯಂತಿ ಕುರಿತು ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್ ಡಾ.ಜಾಗೃತಿ ದೇಶಮಾನ್ಯ ಅವರು ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಋತುಮಾನ ಜ್ವರದ ಪ್ರಕರಣಗಳ ಕುರಿತು ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ವಹಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಮನವಿ

ರಾಯಚೂರು ಜಿಲ್ಲೆಯಲ್ಲಿ ಯಾವುದೇ ರೀತಿಯ ಪರಿಸ್ಥಿತಿ ಎದುರಾದರೂ ಅದನ್ನು ಸಮರ್ಥವಾಗಿ ನಿಭಾಯಿಸಲು ರಾಜ್ಯ ಸರಕಾರದ ನಿಮ್ಮ ಆರೋಗ್ಯ ನಮ್ಮ ಆದ್ಯತೆ ಎಂಬ ಧ್ಯೇಯದಂತೆ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ ಮಾರ್ಗದರ್ಶನದಲ್ಲಿ ಜಿಲ್ಲೆಯಾದ್ಯಂತ ಕಂಡು ಬರುವ ತೀವ್ರ ಉಸಿರಾಟದ ಸೋಂಕುಗಳ ಪ್ರಕರಣಗಳ ನಿಯಂತ್ರಣಕ್ಕಾಗಿ ಕ್ರಮ ವಹಿಸಲಾಗಿದೆ.

ಇದಕ್ಕಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಸಮು ದಾಯ ಆರೋಗ್ಯ ಕೇಂದ್ರಗಳಲ್ಲಿ, ಆರಂಭಿಕ ಹಂತದ ತಪಾಸಣೆ, ಎಲ್ಲ ತಾಲೂಕು ಆಸ್ಪತ್ರೆಗಳಲ್ಲಿ ಅಗತ್ಯವಿರುವವರಿಗೆ ಚಿಕಿತ್ಸೆ ನೀಡಲು ಹಾಗೂ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮೇಲ್ಮಟ್ಟದ ಹೆಚ್ಚಿನ ಚಿಕಿತ್ಸೆ ನೀಡಲು ಕ್ರಮ ವಹಿಸಲಾಗಿದ್ದು, ಹಾಗೂ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯವಾದ ಔಷಧಿಗಳು ಲಭ್ಯವಿರುವಂತೆ ನೋಡಿಕೊಳ್ಳಲಾಗುತ್ತಿದೆ. ಅಲ್ಲದೆ ಆರಂಭಿಕ ಹಂತದಲ್ಲೇ ಗುರುತಿಸಿ ಅಗತ್ಯ ಚಿಕಿತ್ಸೆ ಯನ್ನು ಒದಗಿಸುವ ಕುರಿತು ಆರೋಗ್ಯ ಸಿಬ್ಬಂದಿಗೆ ಅರಿವು ಮತ್ತು ತರಬೇತಿ ನೀಡಲಾಗಿದೆ ಎಂದು ಜಿಲ್ಲಾ ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಸೋಂಕು ತಡೆಗಟ್ಟುವಿಕೆಗಾಗಿ ಸಾರ್ವಜನಿಕರಿಗೆ ಜಾಗೃತಿ: ಜಿಲ್ಲೆಯಲ್ಲಿ ಸೋಂಕು ಕಂಡು ಬಂದವರು ಮಾಸ್ಕ್ ಧರಿಸಬೇಕು. ಕೆಮ್ಮುವಾಗ ಕರ್ಚೀಫ್ ಉಪಯೋಗಿಸಬೇಕು. ಮೊಣಕೈ ಒಳಭಾಗ ಬಾಯಿಗೆ ಅಡ್ಡಲಾಗಿ ಬಳಸಬೇಕು. ಕೈಗಳನ್ನು ಕನಿಷ್ಠ 20 ಸೆಕೆಂಡ್ ಸಾಬೂನು ಮತ್ತು ನೀರಿನಿಂದ ತೊಳೆಯಬೇಕು. ಎಲೆಕ್ಟ್ರಾನಿಕ್, ಮುದ್ರಣ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಸಮುದಾಯಕ್ಕೆ ಜಾಗೃತಿ ನೀಡಲಾಗುವುದು.

ಸಾರ್ವಜನಿಕರು ಏನು ಮಾಡಬೇಕು: ಸೀನುವಾಗ ಮತ್ತು ಕೆಮ್ಮುವಾಗ ಮೂಗು ಮತ್ತು ಬಾಯಿಯನ್ನು ಕರವಸ್ತ್ರದಿಂದ ಮುಚ್ಚಿಕೊಳ್ಳಬೇಕು. ಸೋಪು ಮತ್ತು ನೀರಿನಿಂದ ಕೈಗಳನ್ನು ನಿಯಮಿತವಾಗಿ ತೊಳೆಯಬೇಕು. ಸಾಕಷ್ಟು ಪ್ರಮಾಣದಲ್ಲಿ ನೀರನ್ನು ಸೇವಿಸಬೇಕು. ರೋಗಲಕ್ಷಣಗಳಿರುವ ವ್ಯಕ್ತಿಗಳು ಇತರರಿಂದ ಪ್ರತ್ಯೇಕವಾಗಿರುವುದು ಹಾಗೂ ಅಗತ್ಯ ಮುನ್ನೆಚ್ಚರಿಕೆ ವಹಿಸುವುದು ಸೂಕ್ತ. ಸಾರ್ವಜನಿಕ ಸ್ಥಳಗಳಲ್ಲಿ ತಪ್ಪದೆ ಮಾಸ್ಕ್ ಧರಿಸುವುದು.

ಸಾರ್ವಜನಿಕರು ಏನು ಮಾಡಬಾರದು: ಕಣ್ಣು, ಮೂಗು ಮತ್ತು ಬಾಯಿಯನ್ನು ಕೈಗಳಿಂದ ಪದೇ ಪದೇ ಮುಟ್ಟಬಾರದು. ಸ್ವಯಂ-ಔಷಧೋಪಚಾರ ಮಾಡಬಾರದು. ರೋಗ ಲಕ್ಷಣಗಳಿರುವ ಸಂದರ್ಭದಲ್ಲಿ ಕೈ ಕುಲುಕುವುದನ್ನು ತಪ್ಪಿಸಬೇಕು. ರೋಗ ಲಕ್ಷಣಗಳಿರುವಾಗ ಜನಸಂದಣಿ ಇರುವ ಸ್ಥಳಗಳಿಗೆ ತೆರಳಬಾರದು.

5. ಬಳಸಿದ ಕರವಸ್ತ್ರ/ ನ್ಯಾಪ್ಕಿನ್‌ಗಳನ್ನು ಮರುಬಳಕೆ ಮಾಡಬಾರದು ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ ಗಣೇಶ್ ಕೆ. ಅವರು ಮಾಹಿತಿ ನೀಡಿದರು.

ಖರ್ಗೆ ಭಾಷಣ ಮಾಡಿದ ಸ್ಥಳ ಶುದ್ಧೀಕರಣ ಖಂಡಿಸಿ ಬೀದರ್‌ನಲ್ಲಿ ಪ್ರತಿಭಟನೆ



ಬೀದರ್:,ಆ.26-

ಉತ್ತರಾಖಂಡದ ಹಲ್ದ್ವಾನಿಯ ರಾಮಲೀಲಾ ಮೈದಾನದಲ್ಲಿ ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಸ್ಥಳವನ್ನು ಶುದ್ಧೀಕರಿಸಿರುವ ಘಟನೆಯನ್ನು ಖಂಡಿಸಿ ಪ್ರಗತಿಪರ ನಾಗರಿಕರ ವೇದಿಕೆ ವತಿಯಿಂದ ಮಂಗಳವಾರ ನಗರದಲ್ಲಿ ಖಂಡನಾ ಸಮಾವೇಶ ನಡೆಯಿತು.

ನಗರದ ಡಾ. ಅಂಬೇಡ್ಕರ್ ವೃತ್ತದ ಸಮೀಪ ನಡೆದ ಸಮಾವೇಶದಲ್ಲಿ ಪ್ರತಿಭಟನಾಕಾರರು ಘಟನೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿ, ನಂತರ ಸಹಾಯಕ ಆಯುಕ್ತ ಮುಹಮ್ಮದ್ ಶಕೀಲ್ ಅವರ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಿದರು.

ಪ್ರಗತಿಪರ ನಾಗರಿಕರ ವೇದಿಕೆ ಅಧ್ಯಕ್ಷ ಶಂಕರರಾವ್ ದೊಡ್ಡಿ ಮಾತನಾಡಿ, ಸಂವಿಧಾನ ಜಾರಿಯಾಗಿ ಏಳು ದಶಕಗಳು ಕಳೆದರೂ ದೇಶದಲ್ಲಿ ಜಾತೀಯತೆ ಇನ್ನೂ ಜೀವಂತವಾಗಿರುವುದು ಇಂತಹ ಘಟನೆಗಳಿಂದ ಸ್ಪಷ್ಟವಾಗುತ್ತದೆ. ಖರ್ಗೆ ಅವರನ್ನು ಶುದ್ಧೀಕರಣದ ಹೆಸರಿನಲ್ಲಿ ಅವಮಾನಿಸಿರುವುದು ಖಂಡನೀಯ. ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮಾಜಿ ವಿಧಾನ ಪರಿಷತ್ ಸದಸ್ಯ ಅರವಿಂದಕುಮಾರ್ ಅರಳಿ ಮಾತನಾಡಿ, ಘಟನೆ ಕುರಿತು ವಿವಿಧ ಆರೋಪಗಳು ಕೇಳಿಬರುತ್ತಿವೆ. ಇದರ ಸತ್ಯಾಸತ್ಯತೆ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರನ್ನು ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ವೇದಿಕೆಯ ಉಪಾಧ್ಯಕ್ಷ ಶ್ರೀಕಾಂತ ಸ್ವಾಮಿ ಮಾತನಾಡಿ, ಶುದ್ಧೀಕರಣದ ಹೆಸರಿನಲ್ಲಿ ಖರ್ಗೆ ಅವರಿಗೆ ಅವಮಾನ ಮಾಡಿರುವುದು ಸಂವಿಧಾನದ ಸಮಾನತೆ ಹಾಗೂ ಮಾನವ ಘನತೆಯ ಆಶಯಗಳಿಗೆ ವಿರುದ್ಧವಾಗಿದೆ. ಇಂತಹ ಮನೋಭಾವದ ವಿರುದ್ಧ ಪ್ರಜಾಪ್ರಭುತ್ವವಾದಿಗಳು ಒಗ್ಗೂಡಿ ಧ್ವನಿ ಎತ್ತಬೇಕು ಎಂದರು.

ಹಿರಿಯ ಹೋರಾಟಗಾರ ಬಾಬುರಾವ್ ಹೊನ್ನಾ ಮಾತನಾಡಿ, ದೇಶದಲ್ಲಿ ಹೆಚ್ಚುತ್ತಿರುವ ಸರ್ವಾಧಿಕಾರಿ ಹಾಗೂ ಕೋಮುವಾದಿ ಧೋರಣೆಗಳ ವಿರುದ್ಧ ಸಂವಿಧಾನಪರ ಶಕ್ತಿಗಳು ಒಗ್ಗೂಡಿ ಪ್ರಜಾಸತ್ತಾತ್ಮಕವಾಗಿ ಹೋರಾಟ ನಡೆಸಬೇಕು. ಖರ್ಗೆ ಅವರಿಗೆ ಆಗಿರುವ ಅವಮಾನ ಖಂಡನೀಯವಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಪ್ರಮುಖರಾದ ಡಾ.ಮಕ್ಸೂದ್ ಚಂದಾ, ಪಂಡಿತ್ ಚಿದ್ರಿ, ಸಂಜಯ ಜಾಗೀರದಾರ್, ನಾರಾಯಣ್ ಗಣೇಶ್, ಚಂದ್ರಶೇಖರ್ ಪಾಟೀಲ್ ಹೋಚಕನಳ್ಳಿ, ರಮೇಶ್ ಕಟ್ಟಿತುಗಾಂವ್, ಸುಭಾಷ್ ಲಾಧಾ ಸೇರಿದಂತೆ ಹಲವರು ಮಾತನಾಡಿದರು.

ಈ ಸಂದರ್ಭದಲ್ಲಿ ವಿಜಯನಗರ ಕ್ಯಾಥೋಲಿಕ ಚರ್ಚ್ ಪಾಸ್ಟರ್ ಫಾದರ್ ಸುನೀಲ್, ಮೆಥೋಡಿಸ್ಟ್ ಚರ್ಚ್ ಪಾಸ್ಟರ್ ಸ್ವಾಮಿದಾಸ್, ಭಂತೆ ಸಂಘರಖ್ಖಿತ್, ಮೌಲ್ವಿ ನಿಝಾಮೋದ್ದೀನ್, ಚೊಂಡಿ ಮಠದ ಜಗದೀಶ್ವರ್ ಸ್ವಾಮಿ, ಪ್ರಗತಿಪರ ನಾಗರಿಕರ ವೇದಿಕೆಯ ಪ್ರಮುಖರಾದ ಬಸವರಾಜ್ ಜಾಬಶೆಟ್ಟಿ, ಅಮೃತರಾವ್ ಚಿಮಕೋಡೆ, ಶಿವಮೂರ್ತಿ ಸುಭಾನೆ, ಬಸವರಾಜ್ ಕಾಂಬಳೆ, ಮಾರುತಿ ಶಾಖಾ, ಧನರಾಜ್ ಮುಸ್ತಾಪೂರೆ ಹಾಗೂ ಜಗದೀಶ್ವರ್ ಬಿರಾದಾರ್ ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರು ಹಾಗೂ ನಾಗರಿಕರು ಉಪಸ್ಥಿತರಿದ್ದರು.



ಇಲಕಲ್ಲ ಸೀರತ್ ಅಭಿಯಾನ: ಎರಡು ಕೃತಿಗಳ ಬಿಡುಗಡೆ

ಬಾಗಲಕೋಟೆ,ಆ.26-

ಜಮಾಅತೆ ಇಸ್ಲಾಮೀ ಹಿಂದ್ ಕರ್ನಾಟಕದ ವತಿಯಿಂದ ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿರುವ ಸೀರತ್ ಅಭಿಯಾನದ ಪ್ರಯುಕ್ತ ಸಾಹಿತಿ ಹಾಗೂ ಗ್ರಂಥಕರ್ತ ಯೋಗೇಶ್ ಮಾಸ್ಟರ್ ಅವರು ರಚಿಸಿದ ಮಾನವ ಮನಸ್ಸಿನ ಕೃಷಿಕ - ಮನದೊಡೆಯ ಪ್ರವಾದಿ ಮುಹಮ್ಮದ್(ಸ) ಹಾಗೂ ವಾರ್ತಾ ಭಾರತಿ ದಿನಪತ್ರಿಕೆಯ ಪ್ರಧಾನ ಸಂಪಾದಕರಾದ ಅಬ್ದುಸ್ಸಲಾಮ್ ಪುತ್ತಿಗೆಯವರು ಬರೆದ ಸಮಗ್ರ ಕ್ರಾಂತಿಯ ಜ್ಯೋತಿ ಬೆಳಗಿದ ಪೈಗಂಬರ್ ಮುಹಮ್ಮದ್(ಸ) ಎಂಬ ಎರಡು ಕೃತಿಗಳನ್ನು ಬಿಡುಗಡೆಗೊಳಿಸಲಾಗಿದ್ದು, ಈ ಕೃತಿಗಳನ್ನು ಅಭಿಯಾನದ ಭಾಗವಾಗಿ ರಾಜ್ಯಾದ್ಯಂತ ಜನರಿಗೆ ತಲುಪಿಸಲಾಗುವುದು ಎಂದು ಇಲಕಲ್ಲ ಜಮಾಅತೆ ಇಸ್ಲಾಮೀ ಹಿಂದ್ ಪದಾಧಿಕಾರಿ ಹುಸೇನ ಬಾದಶಾ ಸೂಳಿಭಾವಿ ತಿಳಿಸಿದರು.

ಇಲಕಲ್ಲ ಪಟ್ಟಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆ. 26 ರಿಂದ ಸೆ. 06 ರವರೆಗೆ ಕ್ರಾಂತಿಯ ಜ್ಯೋತಿ: ಪ್ರವಾದಿ ಮುಹಮ್ಮದ್(ಸ) ಎಂಬ ಶೀರ್ಷಿಕೆಯಡಿ ಈ ಬೃಹತ್ ಸೀರತ್ ಅಭಿಯಾನ ನಡೆಯಲಿದೆ. ಪ್ರವಾದಿ ಮುಹಮ್ಮದ್(ಸ) ಅವರು ತಂದ ಸಮಗ್ರ ಕ್ರಾಂತಿಯು ಸತ್ಯ, ನ್ಯಾಯ, ಕರುಣೆ, ಮಾನವ ಸಮಾನತೆ, ಘನತೆ ಹಾಗೂ ಏಕತೆಯ ಮೂಲತತ್ತ್ವಗಳ ಮೇಲೆ ಸ್ಥಾಪಿತವಾಗಿದೆ. ವ್ಯಕ್ತಿಗಳ ನೈತಿಕತೆ ಮತ್ತು ಚಾರಿತ್ರ್ಯವನ್ನು ಶುದ್ಧೀಕರಿಸುವ ಮೂಲಕ ಸುಭಿಕ್ಷೆ ಹಾಗೂ ನಿರ್ಭಯತ್ವದ ಸಮಾಜ ನಿರ್ಮಾಣ ಮಾಡುವುದು ಅವರ ಮುಖ್ಯ ಗುರಿಯಾಗಿತ್ತು. ಈ ಮಾನವೀಯ ಸಂದೇಶವನ್ನು ಕನ್ನಡ ಜನತೆಗೆ ಪರಿಚಯಿಸುವುದು, ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವುದು ಮತ್ತು ಪರಸ್ಪರ ಬಾಂಧವ್ಯಗಳನ್ನು ಬಲಪಡಿಸುವುದು ಈ ಅಭಿಯಾನದ ಪ್ರಮುಖ ಆಶಯವಾಗಿದೆ ಎಂದರು.

ಕ್ರಾಂತಿಯ ಜ್ಯೋತಿ ಪ್ರವಾದಿ ಮುಹಮ್ಮದ್(ಸ) ವಿಷಯದಡಿ ವಿಚಾರಗೋಷ್ಠಿಗಳು, ಸಾರ್ವಜನಿಕ ಸಮಾವೇಶಗಳು, ಸಂವಾದ ಕಾರ್ಯಕ್ರಮಗಳು, ಚರ್ಚಾಗೋಷ್ಠಿಗಳು, ಸೀರತ್ ಪ್ರವಚನ, ಸೀರತ್ ಎಕ್ಸಿಬಿಶನ್ ಹಾಗೂ ಸೌಹಾರ್ದ ಸಂದೇಶ ರ್‍ಯಾಲಿಗಳು.

ಸುದ್ದಿಗೋಷ್ಠಿಯಲ್ಲಿ ಮಹಮ್ಮದ್ ಹುಸೇನ ಬಾಗವಾನ, ಮಹಮ್ಮದ್ ಅಲಿ ಯತ್ನಟ್ಟಿ, ಡಾ. ನೂರ ಮಹಮ್ಮದ ಬಿಳೇಕುದರಿ, ಅಬ್ದುಲ್ ಗಫ್ಫಾರ ತಹಸೀಲ್ದಾರ, ಮಹಮ್ಮದ ತಾಜುದ್ದೀನ, ಮುಷ್ತಾಕ್ ಅಲಿ ಜಾಗಿರದಾರ, ಮುಹಮ್ಮದ್ ಯಾಸೀನ್ ಗಬ್ಬೂರು ಉಪಸ್ಥಿತರಿದ್ದರು

ಬಿಸಿಎಂ ವಸತಿ ನಿಲಯದಲ್ಲಿ ಕಳಪೆ ಆಹಾರ, ಸ್ವಚ್ಛತೆ ಕೊರತೆ ಆರೋಪ : ಕ್ರಮಕ್ಕೆ ಆಗ್ರಹ



ಬೀದರ್,ಆ.26-

ಔರಾದ್ (ಬಿ) ತಾಲೂಕಿನ ಬಿಸಿಎಂ ವಿದ್ಯಾರ್ಥಿ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ಕಳಪೆ ಗುಣಮಟ್ಟದ ಆಹಾರ ನೀಡಲಾಗುತ್ತಿದ್ದು, ಸ್ವಚ್ಛತೆಯ ಕೊರತೆಯೂ ಇದೆ ಎಂದು ಆರೋಪಿಸಿ ಕಲ್ಯಾಣ ಕರ್ನಾಟಕ ನಿರ್ಮಾಣ ಸೇನೆ ವತಿಯಿಂದ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗೆ ಮಂಗಳವಾರ ಮನವಿ ಸಲ್ಲಿಸಲಾಯಿತು.

ವಸತಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ನೀಡುತ್ತಿಲ್ಲ. ಆವರಣದಲ್ಲಿ ಅಗತ್ಯ ಸ್ವಚ್ಛತೆ ಕಾಪಾಡದಿರುವುದರಿಂದ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ, ಸ್ವಚ್ಛ ಹಾಗೂ ಆರೋಗ್ಯಕರ ವಾತಾವರಣ ಕಲ್ಪಿಸಬೇಕು. ವಸತಿ ನಿಲಯದ ನಿರ್ವಹಣೆಯನ್ನು ನಿಯಮಾನುಸಾರ ನಡೆಸುವಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸಂಘಟನೆ ಒತ್ತಾಯಿಸಿದೆ.

ಅಧಿಕಾರಿಗಳು ಕೂಡಲೇ ವಸತಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಆರೋಪಗಳು ಸತ್ಯವೆಂದು ಕಂಡುಬಂದರೆ ಸಂಬಂಧಪಟ್ಟ ತಾಲೂಕು ಅಧಿಕಾರಿ ಹಾಗೂ ನಿಲಯ ಪಾಲಕರ ವಿರುದ್ಧ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ದಾವಿದ್ ಎಕಲರಕರ್, ಕಮಲ್ ಹಾಸನ್ ಬಾವಿದೊಡ್ಡಿ, ವೆಂಕಟರಾವ್ ಪಾಟೀಲ್, ವಿಶಾಲ್ ಚೌಹಾಣ, ಸಚೀನ್ ಗೌಳಿ, ವಿಶಾಲ್ ಕಮಲನಗರ ಹಾಗೂ ಶಿವರಾಜ್ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಡಾ.ಕೆ.ಎಸ್.ಬಂಧುಗೆ ಡಾ.ಬಸವಲಿಂಗ ಪಟ್ಟದೇವರು ಸಾಹಿತ್ಯ ಪ್ರಶಸ್ತಿ



ಬೀದರ್,ಆ.26-

ಅಮರಾವತಿ ಶಿವಯ್ಯ ಹಿರೇಮಠ ಪ್ರತಿಷ್ಠಾನದ ವತಿಯಿಂದ ಡಾ.ಕೆ.ಎಸ್. ಬಂಧು ಅವರಿಗೆ ಪ್ರಸಕ್ತ ಸಾಲಿನ ಡಾ.ಬಸವಲಿಂಗ ಪಟ್ಟದೇವರು ಸಾಹಿತ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಭಾಲ್ಕಿಯ ಚನ್ನಬಸವಾಶ್ರಮದಲ್ಲಿ ಸೋಮವಾರ ಸಂಜೆ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬೀದರ್ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಎಸ್. ಬಿರಾದಾರ್ ಅವರು ಡಾ.ಕೆ.ಎಸ್. ಬಂಧು ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.


ಸಮಾರಂಭದ ಸಾನಿಧ್ಯ ವಹಿಸಿದ್ದ ಡಾ.ಬಸವಲಿಂಗ ಪಟ್ಟದೇವರು ಮಾತನಾಡಿ, ವಿಶ್ವಗುರು ಬಸವಣ್ಣನವರು ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದವರು. ಎಲ್ಲರನ್ನು ತಮ್ಮ ಹೃದಯದಲ್ಲಿ ಇಂಬಿಟ್ಟುಕೊಂಡು ಜಾತಿ-ಭೇದವಿಲ್ಲದೆ ಎಲ್ಲ ಜನಾಂಗದವರನ್ನು ಪ್ರೀತಿಸಿದರು. ಡಾ.ಕೆ.ಎಸ್. ಬಂಧು ಅವರು ಬಸವಣ್ಣನವರ ತತ್ವಾದರ್ಶಗಳನ್ನು ತಮ್ಮ ಜೀವನದಲ್ಲಿ ಪಾಲಿಸಿಕೊಂಡು ಬಂದಿದ್ದಾರೆ ಎಂದು ಹೇಳಿದರು.

ಡಾ.ಕೆ.ಎಸ್. ಬಂಧು ಅವರು ನಡೆ-ನುಡಿ ಒಂದಾಗಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಸದ್ವಿನಯವೇ ಸದಾಶಿವನ ಒಲುಮೆ ಎಂಬ ಗುರು ಬಸವಣ್ಣನವರ ವಚನದಂತೆ ಅವರ ಜೀವನ ಸಾಗುತ್ತಿದೆ. ಅವರಲ್ಲಿ ತಾಯಿ ಹೃದಯವಿದ್ದು, ಶರಣ ಧರ್ಮದ ಪ್ರಮುಖ ಗುಣವಾದ ತನ್ನನ್ನು ತಾನು ತಗ್ಗಿಸಿಕೊಳ್ಳುವ ಸ್ವಭಾವವನ್ನು ಹೊಂದಿದ್ದಾರೆ. ಎದುರಿನ ಪ್ರತಿಯೊಬ್ಬ ವ್ಯಕ್ತಿಯನ್ನೂ ಶಿವನ ಸ್ವರೂಪವೆಂದು ಕಂಡು ಗೌರವಿಸುವ ಸದ್ವಿನಯವನ್ನು ಅವರು ಪಾಲಿಸುತ್ತಿದ್ದಾರೆ. ಇಂತಹ ವ್ಯಕ್ತಿಗೆ ಪ್ರಶಸ್ತಿ ದೊರೆತಿರುವುದು ಸಂತೋಷದ ಸಂಗತಿ ಎಂದರು.

ಗುರುಬಸವ ಪಟ್ಟದೇವರು ಮಾತನಾಡಿ, ಬುದ್ಧನ ಅಷ್ಟಾಂಗ ಮಾರ್ಗ, ಬಸವಣ್ಣನವರ ಕಾಯಕ ತತ್ವ ಹಾಗೂ ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ತತ್ವಾದರ್ಶಗಳನ್ನು ಡಾ.ಕೆ.ಎಸ್. ಬಂಧು ಅವರ ಜೀವನದಲ್ಲಿ ಕಾಣಬಹುದು. ನುಡಿದಂತೆ ನಡೆಯುವ ಅವರ ಸೇವೆಯನ್ನು ಗುರುತಿಸಿ ಅಮರಾವತಿ ಶಿವಯ್ಯ ಹಿರೇಮಠ ಪ್ರತಿಷ್ಠಾನದಿಂದ ಡಾ.ಬಸವಲಿಂಗ ಪಟ್ಟದೇವರು ಸಾಹಿತ್ಯ ಪ್ರಶಸ್ತಿ ನೀಡಿರುವುದು ಸಂತಸದ ವಿಷಯ ಎಂದು ಹೇಳಿದರು. ಡಾ.ಮಕ್ತುಂಬಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂ.ಬಂಡೆಪ್ಪ ಶರಣ ವಹಿಸಿದ್ದರು.

ಈ ಸಂದರ್ಭದಲ್ಲಿ ಶಿಗ್ಗಾವಿ ಜಾನಪದ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಟಿ.ಎಂ.ಭಾಸ್ಕರ್, ಜೈರಾಜ್ ಖಂಡ್ರೆ, ಬಸವರಾಜ್ ನಂದಿ, ಡಾ.ಗವಿಸಿದ್ದಪ್ಪ ಪಾಟೀಲ್, ಸ್ವರೂಪಾ ಬಳತೆ ಹಾಗೂ ದೀಕ್ಷಾ ಸೇರಿದಂತೆ ಇತರರು ಇದ್ದರು. ದೀಪಕ್ ಠಮಕೆ ನಿರೂಪಿಸಿದರು.

ಯಾದಗಿರಿಯಲ್ಲಿ ಎಸ್‌ಐಆರ್ ಕರಡು ಮತದಾರರ ಪಟ್ಟಿ ಪ್ರಕಟ



ಯಾದಗಿರಿ,ಆ.26-

ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಪೂರ್ಣಗೊಂಡಿದ್ದು, ಕರಡು ಮತದಾರರ ಪಟ್ಟಿಯನ್ನು ಸೋಮವಾರ ಪ್ರಕಟಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ರಾಹುಲ್ ಪಾಂಡ್ವೆ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಎಲ್ಲ ತಹಶೀಲ್ದಾರ್ ಕಚೇರಿಗಳು ಹಾಗೂ ಮತಗಟ್ಟೆಗಳಲ್ಲಿ ಕರಡು ಮತದಾರರ ಪಟ್ಟಿಯನ್ನು ಸಾರ್ವಜನಿಕರ ಪರಿಶೀಲನೆಗಾಗಿ ಪ್ರಕಟಿಸಲಾಗಿದೆ ಎಂದರು.

ಕರಡು ಪಟ್ಟಿಗೆ ಸಂಬಂಧಿಸಿದಂತೆ ಮತದಾರರು ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಆಗಸ್ಟ್ 24ರಿಂದ ಸೆಪ್ಟೆಂಬರ್ 23ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಸಲ್ಲಿಕೆಯಾದ ಆಕ್ಷೇಪಣೆಗಳ ವಿಲೇವಾರಿ ಪ್ರಕ್ರಿಯೆ ಅಕ್ಟೋಬರ್ 22ರವರೆಗೆ ನಡೆಯಲಿದೆ ಎಂದು ತಿಳಿಸಿದರು.

ಹೊಸ ಮತದಾರರ ನೋಂದಣಿ: ಕರಡು ಪಟ್ಟಿಯಲ್ಲಿ ಹೆಸರು ಇಲ್ಲದ ಅರ್ಹ ಮತದಾರರು ಹಾಗೂ ಅಕ್ಟೋಬರ್ 1, 2026ಕ್ಕೆ 18 ವರ್ಷ ಪೂರ್ಣಗೊಳ್ಳುವ ಯುವಕ-ಯುವತಿಯರು ನಮೂನೆ- 6 ಮೂಲಕ ಹೆಸರು ಸೇರ್ಪಡೆಗೆ ಅರ್ಜಿ ಸಲ್ಲಿಸಬಹುದು. ಬಿಎಲ್‌ಒಗಳ ಮೂಲಕ ಅಥವಾ ವೋಟರ್ ಸರ್ವಿಸ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶವಿದೆ. ಮತದಾರರ ವಿವರಗಳ ತಿದ್ದುಪಡಿಗೆ ನಮೂನೆ-8 ಸಲ್ಲಿಸಬಹುದು ಎಂದರು.

10.53 ಲಕ್ಷ ಮತದಾರರು : ಎಸ್‌ಐಆರ್ ನಂತರದ ಕರಡು ಪಟ್ಟಿಯಲ್ಲಿ ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 10,53,236 ಮತದಾರರು ಇದ್ದಾರೆ. ಜಿಲ್ಲೆಯಲ್ಲಿ ಸುಮಾರು 8.64 ಲಕ್ಷ ಮತದಾರರ ಡಿಜಿಟೈಜೇಶನ್ ಪೂರ್ಣಗೊಂಡಿದೆ.

ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ 12,264 ನೋ-ಮ್ಯಾಪಿಂಗ್ ಹಾಗೂ 42,798 ಅನಾಮಲೀಸ್ ಪ್ರಕರಣಗಳು ಸೇರಿದಂತೆ ಸುಮಾರು 55 ಸಾವಿರಕ್ಕೂ ಹೆಚ್ಚು ಮತದಾರರನ್ನು ಗುರುತಿಸಲಾಗಿದೆ. ಸಂಬಂಧಪಟ್ಟ ಮತದಾರರಿಗೆ ನೋಟಿಸ್ ನೀಡಿ ಅಗತ್ಯ ದಾಖಲೆಗಳನ್ನು ಪಡೆದು ವಿಚಾರಣೆ ನಡೆಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಮನೆ-ಮನೆ ಸಮೀಕ್ಷೆಯ ವೇಳೆ ಗೈರುಹಾಜರಿದ್ದವರು, ಶಾಶ್ವತವಾಗಿ ಸ್ಥಳಾಂತರಗೊಂಡವರು, ಮೃತಪಟ್ಟವರು, ಈಗಾಗಲೇ ನೋಂದಾಯಿತರಾಗಿರುವವರು (ಡುಪ್ಲಿಕೇಟ್) ಹಾಗೂ ಇತರೆ ವರ್ಗಗಳಿಗೆ ಸೇರಿದ ಒಟ್ಟು 1,89,233 ಮತದಾರರನ್ನು ಗುರುತಿಸಲಾಗಿದೆ ಎಂದರು.

28 ಹೊಸ ಮತಗಟ್ಟೆಗಳು : ಮನೆ-ಮನೆ ಸಮೀಕ್ಷೆಯ ಬಳಿಕ ಜಿಲ್ಲೆಯಲ್ಲಿ 28 ಹೊಸ ಮತಗಟ್ಟೆಗಳನ್ನು ರಚಿಸಲಾಗಿದ್ದು, ಒಟ್ಟು ಮತಗಟ್ಟೆಗಳ ಸಂಖ್ಯೆ 1,162ಕ್ಕೆ ಏರಿಕೆಯಾಗಿದೆ ಎಂದು ರಾಹುಲ್ ಪಾಂಡ್ವೆ ಮಾಹಿತಿ ನೀಡಿದರು.

ಯಾವುದೇ ದೂರು ಅಥವಾ ಆಕ್ಷೇಪಣೆಗಳಿದ್ದಲ್ಲಿ ನಿಗದಿತ ಅವಧಿಯೊಳಗೆ ಸಲ್ಲಿಸಬೇಕು. ಮೊದಲ ಮೇಲ್ಮನವಿಯನ್ನು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಹಾಗೂ ಎರಡನೇ ಮೇಲ್ಮನವಿಯನ್ನು ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಗಳಿಗೆ ಸಲ್ಲಿಸಲು ಅವಕಾಶವಿದೆ. ಸಾರ್ವಜನಿಕರು ಹಾಗೂ ರಾಜಕೀಯ ಪಕ್ಷಗಳ ಬಿಎಲ್‌ಎಗಳು ಕರಡು ಪಟ್ಟಿಯನ್ನು ಪರಿಶೀಲಿಸಿ ಅಗತ್ಯ ಸಹಕಾರ ನೀಡಬೇಕು ಎಂದು ಅವರು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಅಪರ್ ಜಿಲ್ಲಾಧಿಕಾರಿ ರಮೇಶ ಕೋಲಾರ್, ಸಹಾಯಕ ಆಯುಕ್ತ ಶ್ರೀಧರ್ ಗೋಟೂರ್ ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಬರ: ಕೇಂದ್ರದ ನೆರವು ಅಗತ್ಯ

ಇನ್ನೇನು ಮುಂಗಾರು ಮುಗಿಯುತ್ತ ಬಂತು. ಮುಂದಿನ ತಿಂಗಳು ಪ್ರಸಕ್ತ ವರ್ಷದ ಮುಂಗಾರು ಋತು ಕೊನೆಗೊಳ್ಳುತ್ತದೆ. ಈ ವರ್ಷ ಸರಿಯಾಗಿ ಮಳೆಯಾಗಲಿಲ್ಲ. ಪಶ್ಚಿಮ ಘಟ್ಟ ಪ್ರದೇಶವನ್ನು ಹೊರತುಪಡಿಸಿದರೆ ಉಳಿದ ಬಹುತೇಕ ಕಡೆ ಮುಂಗಾರು ಮಾಯವಾಗಿದೆ. ಉತ್ತರ ಕರ್ನಾಟಕದ ಪರಿಸ್ಥಿತಿ ಕಳವಳಕಾರಿಯಾಗಿದೆ. ಅಲ್ಲಿ ಮಳೆಯಾಗಿಲ್ಲವೆಂದಲ್ಲ, ಆದರೆ ನಿರೀಕ್ಷಿಸಿದ ಪ್ರಮಾಣದಲ್ಲಿ ಆಗಲಿಲ್ಲ. ಅಲ್ಪಸ್ವಲ್ಪ ಬಿದ್ದ ಮಳೆಗೆ ಶೇಂಗಾ, ಸಜ್ಜೆ, ಹೈಬ್ರೀಡ್ ಜೋಳ ಸೇರಿದಂತೆ ಹಲವು ಧಾನ್ಯಗಳು ಬಿತ್ತನೆಯಾಗಿವೆ. ದಕ್ಷಿಣದ ಜಿಲ್ಲೆಗಳಲ್ಲಿ ರಾಗಿ ಸೇರಿದಂತೆ ಹಲವಾರು ಬೆಳೆಗಳು ನೀರಿಲ್ಲದೇ ಕಮರಿ ಹೋಗಿವೆ. ಒಂದು ಅಂದಾಜಿನ ಪ್ರಕಾರ ಶೇ. 30ರಷ್ಟು ಕೃಷಿ ಜಮೀನುಗಳಲ್ಲಿ ಬಿತ್ತನೆಯೇ ಆಗಿಲ್ಲ. ರಾಜ್ಯದ ರೈತರು ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದಾರೆ.

ಇಂಥ ಬಿಕ್ಕಟ್ಟಿನ ಸಂದರ್ಭದಲ್ಲಿ ಕೇಂದ್ರ ಸರಕಾರ ಕರ್ನಾಟಕದ ನೆರವಿಗೆ ಬರಬೇಕಾಗಿದೆ. ರಾಜ್ಯ ಸರಕಾರ ಬರ ಪರಿಸ್ಥಿತಿ ಬಗ್ಗೆ ಕೇಂದ್ರಕ್ಕೆ ವರದಿಯನ್ನು ಸಲ್ಲಿಸಿದರೆ ಸಾಲದು, ಸಮಗ್ರವಾದ ವೈಜ್ಞಾನಿಕ ಅಧ್ಯಯನ ನಡೆಸಿ ಮತ್ತೊಂದು ವರದಿಯನ್ನು ಸಲ್ಲಿಸಬೇಕಾಗಿದೆ. ನಾಲ್ಕು ಹವಾಮಾನ ವಲಯಗಳಲ್ಲಿ ಈಗಾಗಲೇ ಅಧ್ಯಯನ ನಡೆಸಲಾಗಿದೆ. ರಾಜ್ಯದಲ್ಲಿ ಬರ ಪರಿಸ್ಥಿತಿ ಬಗ್ಗೆ ಕೇಂದ್ರಕ್ಕೆ ಮನವರಿಕೆ ಮಾಡಬೇಕಾದರೆ ಶೇ. 33ರಷ್ಟು ಬೆಳೆ ನಷ್ಟವಾಗಿದೆ ಎಂಬುದನ್ನು ಸಾಬೀತು ಪಡಿಸಬೇಕಾಗುತ್ತದೆ. ಶೇ. 50ಕ್ಕಿಂತ ಹೆಚ್ಚು ಬೆಳೆ ನಷ್ಟವಾಗಿದ್ದರೆ ರಾಜ್ಯವನ್ನು ತೀವ್ರ ಬರ ಪೀಡಿತ ಎಂದು ಘೋಷಣೆ ಮಾಡಬೇಕಾಗುತ್ತದೆ. ನಂತರ ಕೇಂದ್ರದ ನೆರವು ಬರುತ್ತದೆ.

ಹಿಂದಿನ ಅನುಭವದಿಂದ ಹೇಳಬೇಕಾದರೆ ಈ ಹಿಂದೆ ಅಂದರೆ ಎರಡು ವರ್ಷಗಳ ಹಿಂದೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಈಗಿನದಕ್ಕಿಂತ ಭೀಕರ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿತ್ತು. ಆಗ ರಾಜ್ಯ ಸರಕಾರ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ (ಎನ್‌ಡಿಆರ್‌ಎಫ್) 18,171.44 ಕೋಟಿ ರೂಪಾಯಿ ನೆರವು ಕೋರಿ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಮನವಿ ಸಲ್ಲಿಸಿ ಆರು ತಿಂಗಳು ಗತಿಸಿದರೂ ಕೇಂದ್ರ ಸರಕಾರ ಸ್ಪಂದಿಸಲಿಲ್ಲ, ರಾಜ್ಯದ ಜನರು ಪ್ರಾಣ ಸಂಕಟವನ್ನು ಅನುಭವಿಸುತ್ತಿರುವಾಗಲೂ ನೆರವಿಗೆ ಬಾರದ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರಕಾರದ ಬಗ್ಗೆ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಹಜವಾಗಿ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು. ಕೊನೆಗೆ ಬೇರೆ ದಾರಿ ಕಾಣದೆ ವಿಪತ್ತು ಪರಿಹಾರ ನಿಧಿಯಿಂದ ನೆರವು ಕೊಡಿಸುವಂತೆ ಕೇಂದ್ರ ಗೃಹ ಇಲಾಖೆಗೆ ನಿರ್ದೇಶನ ನೀಡಬೇಕೆಂದು ಸಂವಿಧಾನದ 14 ಮತ್ತು 22ನೇ ವಿಧಿಯನ್ವಯ ಸುಪ್ರೀಂಕೋರ್ಟ್‌ಗೆ ರಾಜ್ಯ ಸರಕಾರ ಅರ್ಜಿ ಸಲ್ಲಿಸಬೇಕಾಯಿತು. ಈಗ ಹಾಗಾಗಬಾರದು. ಈಗಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇದುವರೆಗೆ ಕೇಂದ್ರದ ಜೊತೆಗೆ ಸಂಘರ್ಷದ ಮಾತನ್ನು ಆಡಿಲ್ಲ. ಈ ಮೆದು ಧೋರಣೆಗೆ ಕೇಂದ್ರ ಸರಕಾರ ಸ್ಪಂದಿಸುವುದೇ ಎಂಬುದನ್ನು ಕಾಯ್ದು ನೋಡಬೇಕಾಗಿದೆ.

ಏತನ್ಮಧ್ಯೆ ಈ ತಿಂಗಳ ಅಂತ್ಯದವರೆಗೆ ಮಳೆ ಮತ್ತು ಬೆಳೆ ಪರಿಸ್ಥಿತಿಯನ್ನು ಗಮನಿಸಿ ಬಳಿಕ ಬರ ಘೋಷಣೆಯ ಕುರಿತು ನಿರ್ಧಾರ ಕೈಗೊಳ್ಳುವುದಾಗಿ ಕೃಷಿ ಸಚಿವ ಪಿ.ಎಂ. ನರೇಂದ್ರ ಸ್ವಾಮಿ ಅವರು ಹೇಳಿದ್ದಾರೆ. ಕೃಷಿ ಇಲಾಖೆ ವತಿಯಿಂದ ಐದು ವಾರಗಳ ಮಳೆ ಹಾಗೂ ಬೆಳೆ ಪರಿಸ್ಥಿತಿಯನ್ನು ಅಧ್ಯಯನ ಮಾಡಲಾಗಿದ್ದು, ಬಿತ್ತನೆ ಎಷ್ಟಾಗಿದೆ, ಎಷ್ಟು ಪ್ರಮಾಣದಲ್ಲಿ ಬೆಳೆ ಹಾನಿಯಾಗಿದೆ ಮತ್ತು ಮಳೆ-ಬೆಳೆ ಪರಿಸ್ಥಿತಿ ಹೇಗಿದೆ ಎನ್ನುವ ಕುರಿತು ವಾಸ್ತವಾಂಶಗಳನ್ನು ಒಳಗೊಂಡ ವರದಿಯನ್ನು ತಯಾರಿಸಿ ಕಂದಾಯ ಇಲಾಖೆಗೆ ಸಲ್ಲಿಸಲಾಗುತ್ತದೆ. ನಂತರ ಕಂದಾಯ ಇಲಾಖೆ ಅಗತ್ಯ ದಾಖಲೆಗಳ ಜೊತೆಗೆ ಕೇಂದ್ರ ಸರಕಾರಕ್ಕೆ ವರದಿಯನ್ನು ಸಲ್ಲಿಸಲಿದೆ. ಆನಂತರ ಕೇಂದ್ರದ ತಂಡವು ರಾಜ್ಯದಲ್ಲಿ ಅಧ್ಯಯನ ನಡೆಸಿ ಬರ ಸಂಬಂಧ ನಿರ್ಧಾರ ಕೈಗೊಳ್ಳುತ್ತದೆ. ಹಿಂದೆ ಇವೆಲ್ಲ ಪ್ರಕ್ರಿಯೆಯ ನಂತರವೂ ಅನುದಾನ ಬಿಡುಗಡೆ ಮಾಡಲು ಕೇಂದ್ರ ಸರಕಾರ ಸತಾಯಿಸಿದ್ದನ್ನು ಮರೆಯಲು ಆಗುವುದಿಲ್ಲ.

ವಾಸ್ತವವಾಗಿ ಸದ್ಯದ ಪರಿಸ್ಥಿತಿಯ ಪ್ರಕಾರ ಬಳ್ಳಾರಿ, ವಿಜಯನಗರ, ರಾಯಚೂರು, ಚಿತ್ರದುರ್ಗ, ದಾವಣಗೆರೆ, ಚಾಮರಾಜನಗರ ಜಿಲ್ಲೆ ಸೇರಿದಂತೆ ಹಲವು ಕಡೆ ವಿಪರೀತ ಬೆಳೆ ನಷ್ಟವಾಗಿದೆ. ರಾಜ್ಯದಲ್ಲಿ ಈಗಾಗಲೇ ಬರಗಾಲದ ಛಾಯೆ ಕವಿದಿದೆ. ಇದನ್ನು ರಾಜ್ಯದ ಅಧ್ಯಯನ ತಂಡ ಅತ್ಯಂತ ಎಚ್ಚರದಿಂದ ಸಾಬೀತು ಪಡಿಸಬೇಕಾಗಿದೆ. ಈ ನಡುವೆ ಆಗಸ್ಟ್ 24ರಿಂದ 60 ದಿನಗಳ ಕಾಲ ಮೋಡ ಬಿತ್ತನೆಯನ್ನು ಮಾಡಲಾಗುವುದೆಂದು ಜಲ ಸಂಪನ್ಮೂಲ ಸಚಿವ ಎನ್. ಚಲುವರಾಯ ಸ್ವಾಮಿ ಅವರು ಹೇಳಿದ್ದಾರೆ. ರಾಜ್ಯದ ವಿವಿಧ ಕಡೆ ಒಟ್ಟು 200 ತಾಸುಗಳಷ್ಟು ಕಾರ್ಯಾಚರಣೆ ನಡೆಸಿ ಮೋಡ ಬಿತ್ತನೆಯನ್ನು ಮಾಡಲಾಗುವುದು, ಇದಕ್ಕೆ 28.52 ಕೋಟಿ ರೂಪಾಯಿಯಷ್ಟು ಖರ್ಚಾಗುತ್ತದೆ ಎಂದು ಅವರು ಹೇಳಿದ್ದಾರೆ. ಮಳೆಗಾಗಿ ಹೋಮ ಮಾಡುವಂತೆ ಮುಖ್ಯಮಂತ್ರಿಗಳು ಕೆಲವು ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ವರದಿಯಾಗಿದೆ. ಏತನ್ಮಧ್ಯೆ ಮುಖ್ಯಮಂತ್ರಿಗಳ ಆದೇಶದಂತೆ ಮಡಿಕೇರಿ ಬಳಿಯ ಇಗ್ಗುತ್ತಪ್ಪ ದೇಗುಲದಲ್ಲಿ ರವಿವಾರ ಸಚಿವ ನರೇಂದ್ರ ಸ್ವಾಮಿ ನೇತೃತ್ವದಲ್ಲಿ ಸರಕಾರದಿಂದ ರುದ್ರಾಭಿಷೇಕ ನಡೆದಿದೆ. ಇಂಥ ಪೂಜೆ, ಹೋಮಗಳನ್ನು ನಮ್ಮ ಜನರು ಮಾಡುತ್ತಲೇ ಬಂದಿದ್ದಾರೆ. ಮಳೆ ಬಾರದೇ ಇದ್ದಾಗ ನಮ್ಮ ಜನ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಕಪ್ಪೆ ಮದುವೆ ಮಾಡಿಸುವಂಥ ಮೌಢ್ಯದ ನಂಬಿಕೆಗಳನ್ನೂ ಪಾಲಿಸಿಕೊಂಡು ಬರುತ್ತಿದ್ದಾರೆ. ಆದರೆ ಜನಸಾಮಾನ್ಯರು ಏನಾದರೂ ಮಾಡಲಿ ಸೆಕ್ಯುಲರ್ ಸರಕಾರ ಇಂಥ ಅರ್ಥ ಹೀನ ಮೌಢ್ಯಗಳಿಗೆ ಕುಮ್ಮಕ್ಕು ಕೊಡಬಾರದು.

ಮೋಡ ಬಿತ್ತನೆ ವೈಜ್ಞಾನಿಕ ಕಾರ್ಯಕ್ರಮವಾದರೂ ಇದರಿಂದ ಕೆಲವೊಮ್ಮೆ ಅತಿವೃಷ್ಟಿ, ಅನಾವೃಷ್ಟಿ ಉಂಟಾಗುವ ಅಪಾಯವೂ ಇದೆ ಎಂಬುದು ಪರಿಸರ ಪರಿಣಿತರ ಅಭಿಪ್ರಾಯವಾಗಿದೆ. ಇದರ ಜೊತೆಗೆ ಮಳೆ ಯಾಕೆ ಸಕಾಲದಲ್ಲಿ ಬರುವುದಿಲ್ಲ ಎಂಬ ಬಗ್ಗೆಯೂ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಅರಣ್ಯವನ್ನು ಆಕ್ರಮಿಸಿ, ಅವುಗಳನ್ನು ನಾಶ ಮಾಡಿ ಅಲ್ಲಿ ರೆಸಾರ್ಟ್‌ಗಳನ್ನು, ಗಣಿಗಾರಿಕೆಗಳನ್ನು ಮಾಡುವುದು ಮುಂತಾದ ಪರಿಸರ ಮಾರಕ ಕೃತ್ಯಗಳಿಗೆ ಅವಕಾಶ ನೀಡುವುದರಿಂದ ಬಿಸಿಯೇರುತ್ತಿರುವ ಭೂಮಿ, ಪರಿಸರ ಮಾಲಿನ್ಯ ಇವೆಲ್ಲವುಗಳ ಪರಿಣಾಮವಾಗಿ ಸಕಾಲದಲ್ಲಿ ಮಳೆಯಾಗುತ್ತಿಲ್ಲ. ಈ ಬಗ್ಗೆ ಜನಸಾಮಾನ್ಯರಿಗೆ ತಿಳಿವಳಿಕೆ ನೀಡಬೇಕು. ಸರಕಾರ ಮಾಡುವ ಕೆಲಸ ಸರಕಾರ ಮಾಡಲಿ, ದೇವಾಲಯಗಳು ಮಾಡುವ ಕೆಲಸವನ್ನು ಅವು ಮಾಡುತ್ತವೆ. ದೇವಾಲಯಗಳು ಮಾಡುವ ಕೆಲಸವನ್ನು ಸರಕಾರ ಮಾಡುವುದು ಸರಿಯಲ್ಲ. ಅದೇನೇ ಇರಲಿ ಕೇಂದ್ರ ಸರಕಾರ ರಾಜ್ಯದ ಬರ ಪರಿಸ್ಥಿತಿ ಬಗ್ಗೆ ಆದಷ್ಟು ಬೇಗ ಸ್ಪಂದಿಸಿ ನೆರವಿಗೆ ಬರಬೇಕಾಗಿದೆ.

ಪ್ರಶ್ನೆಪತ್ರಿಕೆ ಸೋರಿಕೆ ಹಗರಣ: ಮಹಾರಾಷ್ಟ್ರದಲ್ಲಿ ಡ್ರಗ್ ಇನ್‌ಸ್ಪೆಕ್ಟರ್ ನೇಮಕಾತಿ ಪ್ರಕ್ರಿಯೆ ಸಂಪೂರ್ಣ ರದ್ದು

ಮಹಾರಾಷ್ಟ್ರದ ಆಹಾರ ಮತ್ತು ಔಷಧ ಆಡಳಿತ ಇಲಾಖೆಯ () ಅಡಿಯಲ್ಲಿ ಬರುವ ಡ್ರಗ್ ಇನ್‌ಸ್ಪೆಕ್ಟರ್ (ಔಷಧ ನಿರೀಕ್ಷಕ- ಗ್ರೂಪ್ ಬಿ) ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಮಹಾರಾಷ್ಟ್ರ ಲೋಕಸೇವಾ ಆಯೋಗವು () ಸಂಪೂರ್ಣವಾಗಿ ರದ್ದುಪಡಿಸಿದೆ. ಈ ವರ್ಷದ ಆರಂಭದಲ್ಲಿ ನಡೆದಿದ್ದ ಪ್ರಾಥಮಿಕ ಸ್ಕ್ರೀನಿಂಗ್ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ, ಮುಂಬೈ ಪೊಲೀಸರು ನೀಡಿದ ಪ್ರಾಥಮಿಕ ತನಿಖಾ ವರದಿಯನ್ನು ಆಧರಿಸಿ ಆಯೋಗವು ಈ ಕಠಿಣ ನಿರ್ಧಾರವನ್ನು ಕೈಗೊಂಡಿದೆ.

ಈ ನೇಮಕಾತಿ ಪ್ರಕ್ರಿಯೆಯ ಹಿನ್ನೆಲೆಯನ್ನು ಗಮನಿಸುವುದಾದರೆ, ಕಳೆದ ವರ್ಷ ಜುಲೈ 29, 2025 ರಂದು ಡ್ರಗ್ ಇನ್‌ಸ್ಪೆಕ್ಟರ್ ಹುದ್ದೆಗಳ ಭರ್ತಿಗಾಗಿ ಆಯೋಗವು ಅಧಿಕೃತ ಅಧಿಸೂಚನೆ ಹೊರಡಿಸಿತ್ತು. ಅದರಂತೆ, ಇದೇ ವರ್ಷ (2026) ಮಾರ್ಚ್ 22 ರಂದು ಮಹಾರಾಷ್ಟ್ರದಾದ್ಯಂತ ಒಟ್ಟು ಆರು ವಿಭಾಗೀಯ ಕೇಂದ್ರಗಳಲ್ಲಿ ಆಫ್‌ಲೈನ್ ಮೂಲಕ ಪ್ರಾಥಮಿಕ ಸ್ಕ್ರೀನಿಂಗ್ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಗಿತ್ತು. ತದನಂತರ, ಜೂನ್ 12 ರಂದು ಆಯೋಗವು ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಿತ್ತು. ಈ ಫಲಿತಾಂಶದ ಆಧಾರದ ಮೇಲೆ ಒಟ್ಟು 506 ಅಭ್ಯರ್ಥಿಗಳು ಮುಂದಿನ ಹಂತವಾದ ಸಂದರ್ಶನಕ್ಕೆ ಅರ್ಹತೆ ಪಡೆದುಕೊಂಡಿದ್ದರು.

ಸಂದರ್ಶನಕ್ಕೆ ಅರ್ಹತೆ ಪಡೆದಿದ್ದವರ ಪೈಕಿ 488 ಅಭ್ಯರ್ಥಿಗಳು ಜುಲೈ 1 ರಿಂದ ಜುಲೈ 22 ರವರೆಗೆ ನಡೆದ ನೇರ ಸಂದರ್ಶನ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಸಂದರ್ಶನ ಪ್ರಕ್ರಿಯೆ ಮುಕ್ತಾಯಗೊಂಡ ಬೆನ್ನಲ್ಲೇ, ಮಹಾರಾಷ್ಟ್ರ ಲೋಕಸೇವಾ ಆಯೋಗವು 488 ಅಭ್ಯರ್ಥಿಗಳ ತಾತ್ಕಾಲಿಕ ಸಾಮಾನ್ಯ ಅರ್ಹತಾ ಪಟ್ಟಿಯನ್ನು (ಮೆರಿಟ್ ಲಿಸ್ಟ್) ಬಿಡುಗಡೆ ಮಾಡಿತ್ತು. ಈ ಪೈಕಿ 485 ಅಭ್ಯರ್ಥಿಗಳನ್ನು ಅಂತಿಮವಾಗಿ ಹುದ್ದೆಗೆ ನೇಮಕಗೊಳ್ಳಲು ಅರ್ಹರೆಂದು ಘೋಷಿಸಲಾಗಿತ್ತು ಮತ್ತು ಕೇವಲ ಮೂವರನ್ನು ಅನರ್ಹರೆಂದು ಪರಿಗಣಿಸಲಾಗಿತ್ತು. ಒಟ್ಟಾರೆಯಾಗಿ, ನೇಮಕಾತಿ ಪ್ರಕ್ರಿಯೆಯು ಬಹುತೇಕ ತನ್ನ ಅಂತಿಮ ಘಟ್ಟವನ್ನು ತಲುಪಿತ್ತು.

ಆದರೆ, ಎಲ್ಲವೂ ಸುಗಮವಾಗಿ ಮುಗಿಯಿತು ಎನ್ನುವಾಗಲೇ ಅಕ್ರಮದ ವಾಸನೆ ಬಡಿಯಲಾರಂಭಿಸಿತು. ಜುಲೈ 22 ರಿಂದ ಜುಲೈ 26 ರ ನಡುವಿನ ಅವಧಿಯಲ್ಲಿ, ಮಾರ್ಚ್ 22 ರಂದು ನಡೆದಿದ್ದ ಪ್ರಾಥಮಿಕ ಪರೀಕ್ಷೆಯ ಕುರಿತು ಆಯೋಗಕ್ಕೆ ಸರಣಿ ದೂರುಗಳು ಬರಲಾರಂಭಿಸಿದವು. ಕೆಲವು ಅಭ್ಯರ್ಥಿಗಳು ಹಾಗೂ ಜನಪ್ರತಿನಿಧಿಗಳು ಇ-ಮೇಲ್ ಮುಖಾಂತರ ಆಯೋಗವನ್ನು ಸಂಪರ್ಕಿಸಿ, ಪರೀಕ್ಷೆಯಲ್ಲಿ ಭಾರೀ ಅಕ್ರಮ ನಡೆದಿದೆ ಎಂದು ಆರೋಪಿಸಿದ್ದರು.

ಜಂತರ್ ಮಂತರ್ ಜೆನ್ ಝಿ ಆಂದೋಲನ- ಪ್ರತಿಭಟನೆಯ ಸಂಭ್ರಮ!

ಪ್ರತಿಭಟನೆಯಲ್ಲಿ 15ರಿಂದ 20 ಆಜುಬಾಜಿನ ವಯಸ್ಸಿನ ಹುಡುಗ ಹುಡುಗಿಯರೇ ಹೆಚ್ಚು ಇದ್ದರು. ನಗರ, ಪಟ್ಟಣದಿಂದ ಬಂದ ಸ್ಥಿತಿವಂತ ಯುವಕ ಯುವತಿಯರು, ದಿಲ್ಲಿಗೆ ಹಳ್ಳಿಯಿಂದ ಬಂದ ಮಧ್ಯಮ ವರ್ಗದವರು, ಬಡವರು ಇದ್ದರು. ನಾನು ಮಾತನಾಡಿಸಿದ್ದವರಲ್ಲಿ ಹೆಚ್ಚಿನವರು ದೆಹಲಿ ಮತ್ತು ಸುತ್ತಮುತ್ತ ಪ್ರದೇಶದವರು. ಉತ್ತರಪ್ರದೇಶ, ಬಿಹಾರ, ಅಸ್ಸಾಂ, ಮಣಿಪುರ, ಪ. ಬಂಗಾಳ, ರಾಜಸ್ಥಾನದಿಂದಲೂ ಬಂದಿದ್ದರು. ಸಂಜೆ ಹೊತ್ತಿಗೆ ದೆಹಲಿ ನಿವಾಸಿಗಳಾದ ಯುವಕರು ಕೆಲಸ ಮುಗಿಸಿ ಬರುತ್ತಿದ್ದರು.

ಜಂತರ್ ಮಂತರ್ ಪ್ರತಿಭಟನಾ ಸ್ಥಳದಲ್ಲಿ ನವ ಯುವಕರ ಹಲವು ಸೃಜನಶೀಲ ಪೋಸ್ಟರ್ ಗಳ ನಡುವೆ, ಪ್ರತಿಭಟನಾ ನಿರತ ವಿದ್ಯಾರ್ಥಿನಿಯೊಬ್ಬಳು ಹಿಡಿದ ಈ ಪೋಸ್ಟರ್ ನನ್ನ ಗಮನ ಸೆಳೆಯಿತು. ವಿದ್ಯಾರ್ಥಿನಿಯನ್ನು ''ಸ್ವಲ್ಪ ವಿವರಿಸಿ'' ಎಂದು ಕೇಳಿದೆ. ''ಇಟ್ಸ್ ಸಿಂಪಲ್ ಜನರು ಸಾಮಾನ್ಯವಾಗಿ ರಾಜಕೀಯ ಎಂಬ ಪದ ಕೇಳಿದರೆ ಸಾಕು ಹೇಸಿಕೊಂಡು ದೂರ ಸರಿಯುತ್ತಾರೆ. ಆದರೆ, ನಾವು ಉಡುವ ದಿರಿಸು, ಉಣ್ಣುವ ಆಹಾರ ಸೇರಿದಂತೆ ನಾವಾಡುವ ಮಾತು ಎಲ್ಲವನ್ನೂ ಆಳುವ ರಾಜಕೀಯ ಶಕ್ತಿ ನಿಯಂತ್ರಿಸಲು ಯತ್ನಿಸುತ್ತಿರುವಾಗ, ರಾಜಕೀಯದಿಂದ ದೂರ ಎನ್ನುವ ಮಾತಿಗೆ ಏನರ್ಥ? ಎಷ್ಟು ಸರಿ? ಹೊಟೇಲಿನಲ್ಲಿ ತಿನ್ನುವ ಫುಟ್ ಪಾತ್ ವಾಸಿಯೂ ತೆರಿಗೆ ಕಟ್ಟುತ್ತಾನೆ. ಅವನು ಕೂಡ ರಾಜಕೀಯದಲ್ಲಿದ್ದಾನೆ. ಅಲ್ಲವೇ?'' ಎಂದಳು. ಹನ್ನೆರಡನೇ ತರಗತಿಯ ವಿದ್ಯಾರ್ಥಿನಿಯಲ್ಲಿ ಇಂತಹ ಪ್ರಬುದ್ಧತೆ ಎಲ್ಲಿಂದ ಬಂತು ಎನ್ನಿಸಿತು. ಇಂತಹ ಅನೇಕ ಹೊಸ ಅನುಭವಗಳು ಜಂತರ್ ಮಂತರ್ ಸೈಟಿನಲ್ಲಿ ಆದವು. ಅವು ಮರೆಯಲಾರದಂತವು.

ಪ್ರತಿಭಟನೆಯಲ್ಲಿ ಹದಿನೈದರಿಂದ ಹಿಡಿದು ಇಪ್ಪತ್ತು ಆಜುಬಾಜಿನ ವಯಸ್ಸಿನ ಹುಡುಗ ಹುಡುಗಿಯರೇ ಹೆಚ್ಚು ಇದ್ದದ್ದು. ನಗರ, ಪಟ್ಟಣದಿಂದ ಬಂದ ಸ್ಥಿತಿವಂತ ಯುವಕ ಯುವತಿಯರು ಅಲ್ಲದೆ ದಿಲ್ಲಿಗೆ ಮೂಲೆ ಹಳ್ಳಿಯಿಂದ ಬಂದ ಮಧ್ಯಮ ವರ್ಗದವರು, ಬಡವರು ಇದ್ದರು. ನಾನು ಮಾತನಾಡಿಸಿದ್ದವರಲ್ಲಿ ಹೆಚ್ಚಿನವರು ದೆಹಲಿ ಮತ್ತು ಸುತ್ತಮುತ್ತ ಪ್ರದೇಶದವರು. ಉತ್ತರಪ್ರದೇಶ, ಬಿಹಾರ, ಅಸ್ಸಾಂ, ಮಣಿಪುರ, ಪ. ಬಂಗಾಳ, ರಾಜಸ್ಥಾನದಿಂದಲೂ ಬಂದಿದ್ದರು. ಸಂಜೆ ಹೊತ್ತಿಗೆ ದೆಹಲಿ ನಿವಾಸಿಗಳಾದ ಯುವಕರು ಕೆಲಸ ಮುಗಿಸಿ ಬರುತ್ತಿದ್ದರು. ದೂರದ ರಾಜ್ಯಗಳಿಂದ ಬಂದವರಲ್ಲಿ, ಕೆಲವರು ಅಪ್ಪ ಅಮ್ಮನ ಒಪ್ಪಿಗೆಯೊಂದಿಗೆ ಬಂದಿದ್ದರೆ, ಇನ್ನೂ ಕೆಲವರು ಬಿಜೆಪಿ, ಮೋದಿ ಅಭಿಮಾನದ ಪೋಷಕರನ್ನೇ ಧಿಕ್ಕರಿಸಿ ಬಂದಿದ್ದರು. ಈ ಎರಡು ಗುಂಪಿಗಿಂತ ವ್ಯತಿರಿಕ್ತವಾಗಿ, ಅಪ್ಪ ಅಮ್ಮಂದಿರು ದೂರದ ದೆಹಲಿಗೆ ಅದೂ ಪ್ರತಿಭಟನೆಗಾಗಿ ಎಂದರೆ ನಿರಾಕರಿಸುತ್ತಾರೆಂದು ಮನೆಗೆ ಹೇಳದೆ ಹಲವರು ಬಂದಿದ್ದರು. ನನಗೆ ಗಾಬರಿಯಾಗಿ ಒಬ್ಬಾತನನ್ನು ''ಮನೆಯಲ್ಲಿ ಹುಡುಕುತ್ತ ಕಳವಳಗೊಳ್ಳುವುದಿಲ್ಲವೇ?'' ಅಂದರೆ, ''ಸಾರ್ಇದು ನಮ್ಮಂಥ ಯುವಕರ ಭವಿಷ್ಯದ ಪ್ರಶ್ನೆ. ಮನೇಲಿದ್ದರೆ ಹೇಗೆ?'' ಅಂದರು.

ಸೊ ಕಾಲ್ಡ್ ಜಿರಳೆಗಳ(?) ಈ ವಿದ್ಯಾರ್ಥಿ ಆಂದೋಲನವು ಆರಂಭದಿಂದಲೂ ಅಚ್ಚರಿ, ಆಕಸ್ಮಿಕ, ಗತ್ಯಂತರವಿಲ್ಲದೆ ಹಿಡಿದ ಹೋರಾಟ ಹಾದಿಯಾಗಿ ತೋರುತ್ತದೆ. ಆ ದಿನ ಸುಪ್ರೀಮ್ ಕೋರ್ಟಿನ ಮುಖ್ಯ ನ್ಯಾಯಾಧೀಶರು ಏನನ್ನು ಮನದಲ್ಲಿಟ್ಟು ''ನಿರುದ್ಯೋಗಿ ಯುವಕರು ಜಿರಳೆಗಳು, ಪರಾವಲಂಬಿಗಳಂತೆ ವ್ಯವಸ್ಥೆಯ ಮೇಲೆ ದಾಳಿ ಮಾಡುತ್ತಾರೆ!'' ಎಂದು ಹೇಳಿದರೊ ಗೊತ್ತಿಲ್ಲ? ಅಭಿಜಿತ್ ದೀಪ್ಕೆ ಸಾಗರದಾಚೆಯ ಅಮೆರಿಕದಲ್ಲಿ ಕುಳಿತ ಯುವಕ ''ಕೆಟ್ಟ ರಾಜಕಾರಣಿಗಳು ದೇಶವನ್ನು ಚರಂಡಿ ಮಾಡಿದ್ದಾರೆ. ಅಲ್ಲಿ ಜಿರಳೆಗಳು ಹುಟ್ಟದೆ ಬೇರೇನು ಹುಟ್ಟಲು ಸಾಧ್ಯ? ಬನ್ನಿ ಜಿರಳೆಗಳೇಎಲ್ಲರೂ ಒಂದೆಡೆ ಸೇರೋಣ'' ಎಂದು ವಿಡಂಬನೆಯಾಗಿ ಟ್ವೀಟ್ ಮಾಡಿದ್ದಷ್ಟೇ! ನಂತರ ಅದಕ್ಕೆ ಸಿಕ್ಕ ಯುವಕರ ಸ್ಪಂದನೆ ಮತ್ತು ಅಸಂಘಟಿತ ಹೋರಾಟಕ್ಕೆ ಸಿಕ್ಕ ಚಾಲನೆಯು ಯಾವ ಸಮಾಜ ಶಾಸ್ತ್ರಜ್ಞರ ಊಹೆಗೂ ನಿಲುಕಲಾರದ್ದು. ಅದೇ ಕಾರಣಕ್ಕೆ ಕಾಕ್ರೋಚ್ ಜನತಾ ಪಾರ್ಟಿಯ ಜನ್ಮತಾಳಿ, ಆನ್ ಲೈನ್ ಯಿಂದ ಆಫ್ ಲೈನ್ ಬೀದಿ ಹೋರಾಟಕ್ಕೆ ಇಳಿದದ್ದು ಈಗ ಇತಿಹಾಸ.

ಮೊದಲಿಂದ ಈ ವಿದ್ಯಾರ್ಥಿ ಪ್ರತಿಭಟನೆಯ ಮಜಲುಗಳನ್ನು ಗಮನಿಸುತ್ತ ಬಂದ ಅನೇಕರು ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಗುಮಾನಿ, ನಿರ್ಲಕ್ಷತೆಯನ್ನು ದಾಖಲಿಸಿದ್ದರು. ಅದಕ್ಕೆ ಅವರು ಕೊಡುತ್ತಿದ್ದ ಮುಖ್ಯ ಕಾರಣ ದಶಕಗಳ ಹಿಂದೆ ಭ್ರಷ್ಟಾಚಾರದ ವಿರುದ್ಧ ಜಂತರ್ ಮಂತರ್ ನಲ್ಲೇ ನಡೆದ ಅಣ್ಣಾ ಹಜಾರೆ ಉಪವಾಸ ನಿರಶನದ ಗೆಲುವಿನ ಸೋಲು. ಆ ಹೋರಾಟ ಫಲ ಕೊಟ್ಟಿತ್ತು. ಆ ಫಲವನ್ನು ಪ್ರತಿಭಟನೆಯಲ್ಲಿ ಭಾಗವಹಿಸಿದ ಬಹುಮಂದಿ ಲಜ್ಜೆ ಇಲ್ಲದೆ ಬಿಜೆಪಿ ಸರ್ಕಾರದಲ್ಲಿ ಅಧಿಕಾರ ಹಿಡಿದು ಚಪ್ಪರಿಸಿದ್ದರು.

ಆ ಕಹಿ ಅನುಭವ ಈಗಲೂ ನೆನಪಲ್ಲಿ ಹಸಿಯಾಗಿರುವಾಗ, ಈ ವಿದ್ಯಾರ್ಥಿ ಹೋರಾಟವು ಕೂಡ ಆಮ್ ಆದ್ಮಿ ಪಾರ್ಟಿ ಅಥವಾ ಆಳುವ ಬಿಜೆಪಿ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮವಾಗಿರಬಹುದು ಎಂದು ಗುಮಾನಿ ಪಟ್ಟಿದ್ದರು; ಅದು ಸಹಜ. ಆದರೆ ಸಾರ್ವಜನಿಕ ಸ್ಥಳಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಮನೆಮನೆಗಳಲ್ಲಿಯೂ, ಮೋದಿ ಸರ್ಕಾರದ ಜನವಿರೋಧಿ ನೀತಿಗಳನ್ನು ಪ್ರಶ್ನಿಸುವವರನ್ನೇ ಪ್ರಶ್ನಿಸುವ ವಾತಾವರಣ ನಿರ್ಮಾಣವಾಗಿ ದಶಕಗಳಾಯಿತು. ಎತ್ತಿದ ಪ್ರಶ್ನೆಗಳು ಕ್ರೋಢೀಕರಣಗೊಂಡು ಜನಾಭಿಪ್ರಾಯ ರೂಪಿತವಾಗದಂತೆ, ಜನಗಳೇ ವಿಷಯಾಂತರ ಮಾಡಿ ಧ್ವಂಸ ಮಾಡುತ್ತಿರುವ ದುರಿತಕಾಲದಲ್ಲಿ, ಜೆನ್ ಜಿ ಯುವಕರು ಆಳುವ ಸರ್ಕಾರವನ್ನು ಎದುರು ಹಾಕಿಕೊಳ್ಳಲು ಅಂಜದೆ ಆಂದೋಲನಕ್ಕೆ ಸ್ಪಂದಿಸುತ್ತಿರುವುದು ಮತ್ತು ಪ್ರತಿರೋಧದ ಎಲ್ಲಾ ದಾರಿಗಳು ಮುಚ್ಚಿವೆ ಎನ್ನುವ ಹೊತ್ತಲ್ಲಿ ಈ ದೇಶದ ಭವಿಷ್ಯಕ್ಕೊಂದು ಭರವಸೆ ಮೂಡುತ್ತಿದೆ ಎನಿಸಿತು.

ವಿದ್ಯಾರ್ಥಿ ಆಂದೋಲನ ಯಶ್ವಸಿಯಾಗುತ್ತದೋ? ಇಲ್ಲವೋ? ಅದರ ಚರ್ಚೆಯೇ ಅಪ್ರಸ್ತುತ ಅನಿಸಿತು. ಸಾಮಾನ್ಯವಾಗಿ ಜೆನ್ ಜಿಗಳು ತಮ್ಮದೇ ಲೋಕದಲ್ಲಿ ಕಂಫರ್ಟ್ ಆಗಿರುತ್ತಾರೆ. ಮೊಬೈಲ್ ನೋಡುತ್ತ ಕೂರುವ ಅವರ ಏಕಾಂತದಲ್ಲಿ ಲೋಕಾಂತಕ್ಕೆ ಪ್ರವೇಶವಿರದು ಎಂಬುದು ತಪ್ಪು ಗ್ರಹಿಕೆಯೆಂದು ಅವರ ನಡೆ ಸಾಬೀತು ಮಾಡುತ್ತಿತ್ತು.

ಜೂನ್ 20 ರಂದು ರಾಜಧಾನಿ ದೆಹಲಿಯ ಜಂತರ್ ಮಂತರ್ ಸೈಟಿನಲ್ಲಿ ಪ್ರಾರಂಭವಾದ ಜೆನ್ ಜಿ ವಿದ್ಯಾರ್ಥಿಗಳ ಪ್ರತಿಭಟನೆಗೆ ಪ್ರಧಾನ ಮಂತ್ರಿ ಮೋದಿ ನೇತೃತ್ವದ ಒಕ್ಕೂಟ ಸರ್ಕಾರ ತಿರಸ್ಕಾರದ ಕಡೆಗಣ್ಣು ಬೀರಿದಾಗ, ಉಪವಾಸ ನಿರಶನ ಕೂತ ಸೋನಮ್ ವಾಂಗ್ಚುಕ್ ಅವರು ಜುಲೈ 20 ರಂದು ಸಂಸತ್ ಚಲೋ ಪ್ರತಿಭಟನಾ ರ್‍ಯಾಲಿಗೆ ಸಾರ್ವಜನಿಕ ಕರೆ ನೀಡಿದ್ದರು. ಉಪ್ಪು ಮತ್ತು ನೀರನ್ನು ಮಾತ್ರ ಸೇವಿಸುತ್ತ ಕೂತ ಅವರ ಉಪವಾಸ ನಿರಶನ ಆದಾಗಲೇ ಹದಿನೆಂಟು ದಿನಗಳು ಕಳೆದಿತ್ತು. ಆರೋಗ್ಯ ದಿನೇ ದಿನೇ ಕ್ಷೀಣಿಸಿ, ಜೀವಕ್ಕೆ ಕುತ್ತಾಗುವ ಎಲ್ಲಾ ಸೂಚನೆ ಇದ್ದವು.

ಇದೇ ಕಾರಣವಾಗಿ ಜಂತರ್ ಮಂತರ್ ನಲ್ಲಿಯೇ ಮನಸ್ಸು ನೆಟ್ಟು ಆತಂಕದಿಂದ ಮನೆಯಲ್ಲಿ ಚಡಪಡಿಸುವುದರ ಬದಲು ಅಲ್ಲಿಗೆ ಹೋಗುವುದೇ ಸರಿಯೆನಿಸಿತು. ಕಳೆದ ವರ್ಷ ಬಾಪು ಹುಟ್ಟುದಿನದಂದು ಸಹಪಾಠಿ ಗೆಳೆಯನನ್ನು ವರಿಸಿದ ಜೆನ್ ಜಿ ಮಗಳಿಗೆ ದೆಹಲಿಗೆ ಹೋಗುವ ನಿರ್ಧಾರ ತಿಳಿಸಿದೆ. ''ಕೆಲಸದ ಒತ್ತಡದಲ್ಲಿ ನಾವಂತೂ ಹೋಗಲು ಸಾಧ್ಯವಾಗುತ್ತಿಲ್ಲ. ನೀನು ಮೊದಲು ಹೊರಡು. ಇಲ್ಲದಿದ್ದರೆ



ನಾವುಗಳು ಜೀವನವಿಡೀ ಪಾಪಪ್ರಜ್ಞೆಯಿಂದ ನರಳಬೇಕಾದೀತು'' ಅಂದಳು. ಅವಳು ಹೇಳಿದ ಮಾತು ನನ್ನನ್ನು ಭಾವುಕಗೊಳಿಸಿತು. ಮಗಳು -ಅಳಿಯ ಇಬ್ಬರೂ ವಿಮಾನಯಾನಕ್ಕೆ ಟಿಕೇಟು ತೆಗೆದು ಬೀಳ್ಕೊಟ್ಟರು. ಬೆಂಗಳೂರಿನಿಂದ ದೆಹಲಿಗೆ ಹೊರಟಾಗಲೇ, ಸೋನಮ್ ವಾಂಗ್ಚುಕ್ ಅವರನ್ನು ಪ್ರೊಟೆಸ್ಟ್ ಸೈಟಿನಿಂದ, ಸಿವಿಲ್ ಡ್ರೆಸ್ಸಿನಲ್ಲಿದ್ದ ಪೊಲೀಸರು (?) ನಿಶ್ಯಕ್ತರಾಗಿದ್ದರೂ ಅನುಕಂಪ ತೋರದೆ, ಸ್ಟ್ರೆಚರ್ ಇಲ್ಲದೆ ಬೆಡ್ ಶೀಟಲ್ಲಿ ಸುತ್ತಿಕೊಂಡು ಹೊತ್ತೊಯ್ದ ಸುದ್ದಿ ಸಿಟ್ಟು, ನೋವನ್ನು ತಂದಿತ್ತು.

ಜುಲೈ 18ರ ರಾತ್ರಿ ಎಂಟರ ಹೊತ್ತಿಗೆ ಇಂದಿರಾಗಾಂಧಿ ಏರ್ ಪೋರ್ಟಿಂದ ಪಹರ್‌ಗಂಜ್ ಪ್ರದೇಶದ ಚೂನಾಮಂಡಿಯಲ್ಲಿದ್ದ ಹೊಟೇಲಿಗೆ ಬಂದೆ. ಬೆಂಗಳೂರಿನ ಅವಿನ್ಯೂ ರಸ್ತೆ, ಬಳೇಪೇಟೆ, ಚಿಕ್ಕಪೇಟೆಯಂತಹ ಗಲ್ಲಿಗಳ ಆ ಜಾಗ ಧೂಳುಮಯ. ಇಡೀ ಮೈ ಬೆವರಿನ ಸ್ನಾನ. ಬೆಂಗಳೂರಿನ ತಂಪು ವಾತಾವರಣದಲ್ಲಿ ಬೆಳೆದವರಿಗೆ ದೆಹಲಿ ಬಿಸಿಲಿನ ಧಗೆ ಹಿಮ್ಮೆಟ್ಟಿಸುವಂತಾದ್ದು. ಇಲ್ಲಿಗೆ ಬಂದ ಕೂಡಲೇ ಜಂತರ್ ಮಂತರ್ ಗೆ ಹೋಗಬೇಕೆಂದು ಕೊಂಡವನಿಗೆ ಆಯಾಸದಿಂದ ಸಾಧ್ಯವಾಗಲಿಲ್ಲ.

ಸಂಸತ್ ಚಲೋ ಪ್ರತಿಭಟನೆಯ ಹಿಂದಿನ ದಿನ ಅಂದರೆ ಜುಲೈ 19ರಂದು, ಸಂಸತ್ ಮಾರ್ಗ್ ನಲ್ಲಿರುವ ಪಟೇಲ್ ಚೌಕ್ ದಾಟಿ ಆಟೊದಲ್ಲಿ ಬರುವಾಗ, ನೂರಾರು ಸಂಖ್ಯೆಯಲ್ಲಿ ಯುವಕರು ಉತ್ಸಾಹದಿಂದ ದಾಪುಗಾಲು ಹಾಕುತ್ತ, ಧಿಕ್ಕಾರದ ಘೋಷಣೆ ಕೂಗುತ್ತ ಜಂತರ್ ಮಂತರ್ ಕಡೆಗೆ ಹೊರಟಿದ್ದರು.

ವಾಂಗ್ಚುಕ್ ಅವರನ್ನು ಪ್ರತಿಭಟನಾ ಸ್ಥಳದಿಂದ ಎತ್ತಂಗಡಿ ಮಾಡಿದ್ದ ನೋವು, ಸಿಟ್ಟು ವಿದ್ಯಾರ್ಥಿಗಳ ಆ ಆಕ್ರೋಶದ ಕೂಗಲ್ಲಿ ವ್ಯಕ್ತವಾಗುತ್ತಿತ್ತು.

ಪ್ರತಿಭಟನಾ ಸ್ಥಳದ ಅನತಿ ದೂರದಲ್ಲಿಯೇ, ಕೇಂದ್ರ ಗೃಹ ಮಂತ್ರಾಲಯ, ನವದೆಹಲಿ ಪಾಲಿಕಾ ಕೇಂದ್ರ, ಎಸ್ ಬಿ ಎಮ್ ಬ್ಯಾಂಕಿನ ಕಟ್ಟಡ ಇರುವ ಜೈ ಸಿಂಗ್ ಮಾರ್ಗ್, ಸಂಸತ್ ಮಾರ್ಗ್ ಕೂಡು ರಸ್ತೆಯಲ್ಲಿನ ಟಾಲ್ ಸ್ಟಾಯ್ ಮಾರ್ಗ್‌ಗೆ ಬ್ಯಾರಿಕೇಡ್ ಗಳನ್ನು ಹಾಕಿ ವಾಹನ ಸಂಚಾರ ನಿಲ್ಲಿಸಲಾಗಿತ್ತು. ಅಲ್ಲಿಂದ ಪ್ರೊಟೆಸ್ಟ್ ಸೈಟಿಗೆ ನಡೆದೇ ಹೋಗಬೇಕಿತ್ತು. ಎಲ್ಲಿ ನೋಡಿದರಲ್ಲಿ ದೆಹಲಿ ಪೊಲೀಸರು, ಆರ್‌ಎಎಫ್, ಸಿಆರ್‌ಪಿಎಫ್ ತುಕಡಿಗಳು ಲಾಠಿ ಹಿಡಿದು ಜಂತರ್ ಮಂತರ್ ಸೈಟಿನವರೆಗೂ ಅಧಿಕ ಸಂಖ್ಯೆಯಲ್ಲಿ ಕಂಡರು. ಕಡೆಗೂ ಜಂತರ್ ಮಂತರ್ ಪ್ರತಿಭಟನಾ ಸ್ಥಳ ಕಂಡಾಗ ಎಂತದ್ದೋ ನಿರಾಳತೆ.

ಸೈಟಿನ ಪ್ರವೇಶದಲ್ಲಿ ಪೊಲೀಸ್ ಬಂದೋಬಸ್ತು ಮತ್ತೂ ಜೋರಾಗಿತ್ತು. ಮೆಟಲ್ ಡಿಟೆಕ್ಟರ್ ಹಾದು ಒಳ ಹೋಗುವ ಮೊದಲು ಬ್ಯಾಗ್ ಪ್ಯಾಕ್, ಕೈಚೀಲಗಳ ಸ್ಕ್ಯಾನಿಂಗ್ ಮಾಡಿ, ಚೆಕ್ಕಿಂಗ್ ಸ್ಟಿಕ್ಕರನ್ನು ಬ್ಯಾಗಿಗೆ ಅಂಟಿಸುತ್ತಿದ್ದರು. ಪ್ಯಾಂಟು ಶರಟಿನ ಜೇಬಿನ ತಪಾಸಣೆ ಇಲ್ಲದೆ ಒಳಗೆ ಯಾರನ್ನೂ ಬಿಡುತ್ತಿರಲಿಲ್ಲ. ನಿರಂತರವಾಗಿ ಬರುತ್ತಿದ್ದ ವಿದ್ಯಾರ್ಥಿಗಳನ್ನು ಚೆಕ್ ಮಾಡುತ್ತ, ಆ ಬಿಸಿಲಿನ ಧಗೆಗೆ ಅವರೂ ಬಸವಳಿಯುತ್ತಿದ್ದರು.

ಒಳ ಹೋದಾಗ ಟೀವಿಯಲ್ಲಿ ನೋಡಿದಂತೆ, ವೇದಿಕೆಯ ಮುಂದೆ ಇಪ್ಪತ್ತು ಮೂವತ್ತು ಅಡಿ ಅಂತರದಲ್ಲಿ ಹಾಕಿದ್ದ ಬ್ಯಾರಿಕೇಡ್ ವರೆಗೂ ಹೋಗಬಹುದಾಗಿದ್ದರೂ, ಈಗ ಅದರ ಸಮೀಪಕ್ಕೆ ಹೋಗಲಾರದಷ್ಟು ವಿದ್ಯಾರ್ಥಿಗಳು ನೆರೆದಿದ್ದರು. ಶಿಕ್ಷಣ ಮಂತ್ರಿ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೋರಿ, ಮೋದಿ ಸರ್ಕಾರ ಶಿಕ್ಷಣ ನೀತಿ ವಿರುದ್ಧ ಹಲವು ಬಗೆಯ ಘೋಷಣೆಗಳು ಮೊಳಗುತ್ತಿದ್ದವು. ಜೊತೆಜೊತೆಗೆ ಇಂಕ್ವಿಲಾಬ್ ಜಿಂದಾಬಾದ್ ಜೈ ಭೀಮ್ ಜೈ ಭೀಮ್ ವಂದೇ ಮಾತರಮ್ ಭಾರತ್ ಮಾತಾಕೀಜೈ ಎಂಬ ಜಯಕಾರಗಳು ಇದ್ದವು.

ಗುಂಪುಗುಂಪಾಗಿ ಕೂತ ವಿದ್ಯಾರ್ಥಿಗಳು ಪ್ರತಿರೋಧದ ಹಾಡುಗಳನ್ನು ಹಾಡುತ್ತಿದ್ದರು. ಅಲ್ಲಿ ವಿದ್ಯಾರ್ಥಿಗಳ ಉತ್ಸಾಹ, ಪ್ರತಿಭಟನೆಯ ಸಂಭ್ರಮಕ್ಕೆ ಬಿಸಿಲಿನ ಬೆಂಕಿಯ ಬೇಗೆ ದಣಿದಿತ್ತು. ವ್ಯವಸ್ಥೆಯ ಮೇಲಿನ ಸಿಟ್ಟು, ಕೋಪ, ಹತಾಶೆ, ನಿಟ್ಟುಸಿರು ಜಂತರ್ ಮಂತರ್ ಪ್ರತಿಭಟನಾ ಸೈಟಿನಲ್ಲಿ ವಾತಾವರಣದಲ್ಲಿ ಮಿಳಿತವಾಗಿತ್ತು. ಅವು ಸೃಜನಶೀಲ ಪೋಸ್ಟರ್ ಬರಹಗಳಲ್ಲಿ ಅಭಿವ್ಯಕ್ತವಾಗುತ್ತಿತ್ತು. ಕೇವಲ ತಲೆಯ ಮೇಲೊಂದು ಟಾರಪಾಲಿನ ಹೊದಿಕೆ ಇದ್ದ ಟೆಂಟ್ ಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿದಂತೆ ಹಲವು ಸಂಘಟನೆಗಳು, ಅಸಂಘಟಿತ ವಿದ್ಯಾರ್ಥಿಗಳು ಉಪವಾಸ ಕೂತಿದ್ದರು.

ಸಂಜೆಯಾಗಿ ರಾತ್ರಿಯಾಗುತ್ತಿದ್ದಂತೆ, ಅದೂ ನಡುರಾತ್ರಿಯ ವರೆಗೂ ಜನರು ಬರುತ್ತಲೇ ಇದ್ದರು. ಆ ಸೈಟಿನಲ್ಲಿ ಕಾಲು ಇರಿಸಲು ಜಾಗವಿಲ್ಲದಾಗಿ ಸೈಟಿನ ಆಚೆ ಟಾಲ್ ಸ್ಟಾಯ್ ಮಾರ್ಗ್, ಜನಪಥ್ ಮಾರ್ಗ್ ಗೆ ಹೋಗುವ ಅಡ್ಡರಸ್ತೆಗಳಲ್ಲಿ ವಿದ್ಯಾರ್ಥಿಗಳು ಜಮಾಯಿಸುತ್ತಿದ್ದರು. ಪ್ರತಿಭಟನೆಯ ಕಾವು ಏರುತ್ತಿದ್ದರೂ, ಮರುದಿನದ ಸಂಸತ್ ಚಲೋ ರ್‍ಯಾಲಿ ನಡೆಯದಂತೆ ದೆಹಲಿ ಸರ್ಕಾರ ಸೆಕ್ಷನ್ 144 ನಿಷೇಧಾಜ್ಞೆ ಹೊರಡಿಸಿತ್ತು. ಒಳಗೊಳಗೆ ರ್‍ಯಾಲಿಗೆ ಪೊಲೀಸರು ತಡೆ ಒಡ್ಡುವ ಆತಂಕ ಇತ್ತಾದರೂ ರಣ ಉತ್ಸಾಹದಲ್ಲಿದ್ದ ಯಾವ ವಿದ್ಯಾರ್ಥಿಯು ಆ ಬಗ್ಗೆ ತಲೆಕೆಡಿಸಿಕೊಂಡಂತೆ ಕಾಣಲಿಲ್ಲ.

ಜುಲೈ 20ರಂದು ಬೆಳಿಗ್ಗೆ ಸುಮಾರು 9ರ ಹೊತ್ತಿಗೆ ಎಂದಿನಂತೆ ಪಟೇಲ್ ಚೌಕ್ ಹಾದು ಜಂತರ್ ಮಂತರ್ ಸೈಟಿಗೆಂದು ಬಂದರೆ ಅಲ್ಲಿಗೆ ತಲುಪಲು ಸಾಧ್ಯವಾಗಲಿಲ್ಲ. ದೂರದಲ್ಲೇ ಮೊದಲೇ ಹೇಳಿದ ಕೇಂದ್ರ ಗೃಹ ಮಂತ್ರಾಲಯ, ನವದೆಹಲಿ ಪಾಲಿಕಾ ಕೇಂದ್ರ, ಎಸ್ ಬಿಎಮ್ ಬ್ಯಾಂಕಿನ ಕಟ್ಟಡ ಇರುವ ಕೂಡು ರಸ್ತೆಯಲ್ಲಿಯೇ ಬ್ಯಾರಿಕೇಡ್ ಗಳನ್ನು ಹಾಕಿ ವಿದ್ಯಾರ್ಥಿಗಳನ್ನು ತಡೆದಿದ್ದರು. ಅಂದರೆ ಜಂತರ್ ಮಂತರ್ ಪ್ರೊಟೆಸ್ಟ್ ಸೈಟಿನಲ್ಲಿ ನೆರೆದಿದ್ದ ಅಷ್ಟೂ ವಿದ್ಯಾರ್ಥಿಗಳನ್ನು ಅಲ್ಲಿಂದ ಹೊರಬರದಂತೆ ಹಲವು ಸಾಲಿನ ಬ್ಯಾರೀಕೇಡ್ ಹಾಕಿ ನಿರ್ಬಂಧಿಸಿ, ಅದರಾಚೆ ಸುಮಾರು 300 ಮೀ. ಉದ್ದವಿದ್ದ ಟಾಲ್ ಸ್ಟಾಯ್ ಮಾರ್ಗ್ ನಲ್ಲಿದ್ದ ವಿದ್ಯಾರ್ಥಿಗಳನ್ನೂ, ಕೂಡು ರಸ್ತೆಯಲ್ಲಿ ಪಾರ್ಲಿಮೆಂಟ್ ಗೆ ಹೋಗದಂತೆ ತಡೆದಿದ್ದರು. ವಿದ್ಯಾರ್ಥಿ ಯುವಕರ ಕೂಗು, ಘೋಷಣೆ, ಆಕ್ರೋಶ ಮುಗಿಲು ಮುಟ್ಟಿತ್ತು. ಸಂಸತ್ ಮಾರ್ಗ್ ಗೆ ಹೋಗದಂತೆ ತಡೆದಿದ್ದು ಅವರನ್ನು ಅಸಮಾಧಾನಕ್ಕೆ ತಳ್ಳಿತ್ತು. ಲಾಠಿ ಹಿಡಿದ ಎಲ್ಲಾ ವಿವಿಧ ಖಾತೆಗಳ ಪೊಲೀಸರು ಅಧಿಕ ಸಂಖ್ಯೆಯಲ್ಲಿದ್ದರು. ಅತ್ತಲ್ಲಿಂದ ವಿದ್ಯಾರ್ಥಿಗಳು ಬ್ಯಾರಿಕೇಡ್ ಅನ್ನು ದಾಟಿ ಬರಲು ಪ್ರಯತ್ನಿಸುತ್ತಿದ್ದರೆ, ಇತ್ತಲ್ಲಿಂದ ಪೊಲೀಸರು ಲಾಠಿ ಬೀಸಿ ತಡೆಯುತ್ತಿದ್ದರು. ಕೆಲವು ಆಕ್ರಮಣಕಾರಿ ವಿದ್ಯಾರ್ಥಿಗಳು ಬ್ಯಾರಿಕೇಡ್ ಏರಿ ಅಥವಾ ಗುಂಪು ಪೊಲೀಸರ ಮಧ್ಯೆ ನುಸುಳಿ ಬಂದರೆ ಅವರನ್ನು ನಿರ್ದಾಕ್ಷಿಣ್ಯವಾಗಿ ಅಲ್ಲೇ ಇದ್ದ ಪೊಲೀಸ್ ಬಸ್ಸಿನೊಳಗೆ ತುರುಕುತ್ತಿದ್ದರು. ಹಾಗೆ ಬಂಧಿಸಲ್ಪಟ್ಟ ನಡು ವಯಸ್ಸಿನ ಹೆಂಗಸೊಬ್ಬಳು ಕಣ್ಣೀರು ಹಾಕುತ್ತ ಬಸ್ಸಿನ ಬಾಗಿಲು ತೆಗೆಯುವಂತೆ ಒಳಗೇ ಗೋಳಾಡುತ್ತಿದ್ದಳು. ಅದೇ ಬಸ್ಸಿನಲ್ಲಿದ್ದ ಬಂಧಿತ ಯುವಕ ಯುವತಿಯರು ತ್ರಿವರ್ಣ ಬಾವುಟ ಹಾರಿಸುತ್ತ ಪೊಲೀಸರ ದೌರ್ಜನ್ಯಕ್ಕೆ, ಮೋದಿ ಸರ್ಕಾರಕ್ಕೆ ಧಿಕ್ಕಾರ ಕೂಗುತ್ತಿದ್ದರು.

ಬಲ ಪ್ರಯೋಗದಿಂದ ಬ್ಯಾರಿಕೇಡ್ ನ ಮುರಿಯಲು ಯತ್ನಿಸುವ ವಿದ್ಯಾರ್ಥಿಗಳು; ಆಚೆ ಬದಿಯಲ್ಲಿ ನಿಂತು ಅವರನ್ನು ನಿಯಂತ್ರಿಸಲು ಹೆಣಗಾಡುತ್ತಿದ್ದ ಪೊಲೀಸರು ಈ ಹಗ್ಗಜಗ್ಗಾಟದಲ್ಲಿ ವಿದ್ಯಾರ್ಥಿಗಳು ಮಧ್ಯಾಹ್ನ ಸುಮಾರು ಎರಡರ ಹೊತ್ತಿಗೆ ಬ್ಯಾರಿಕೇಡ್ ಗಳನ್ನು ಬೀಳಿಸಿ ಆಚೆ ಬರತೊಡಗಿದರು.

ಅಣೆಕಟ್ಟು ಒಡೆದಂತೆ ಸಾಗರೋಪಾದಿಯಲ್ಲಿ ಹೊರ ಬಿದ್ದ ವಿದ್ಯಾರ್ಥಿಗಳು ಪಟೇಲ್ ಚೌಕ್ ನತ್ತ ಓಡ ತೊಡಗಿದರು. ಸಾವಿರಾರು ಸಂಖ್ಯೆಯಲ್ಲಿದ್ದ ಅವರನ್ನು ಪೊಲೀಸರು ತಡೆಯಲಾಗಲಿಲ್ಲ. ಆದರೆ, ಆ ಸುನಾಮಿ ಪಟೇಲ್ ಚೌಕನ್ನು ತಲುಪದಂತೆ, ಸರ್ಕಲ್ಲಿಗೆ ಮುಂಚೆಯೇ ಬ್ಯಾರಿಕೇಡ್ ಗಳ ಜೊತೆಗೆ ಬಸ್ಸು ಗಳನ್ನು ಅಡ್ಡಲಾಗಿ ನಿಲ್ಲಿಸಿ ತಡೆಯಲಾಯಿತು. ಎಷ್ಟು ವಿದ್ಯಾರ್ಥಿಗಳು ಅಲ್ಲಿದ್ದರು ಎಂದರೆ ಕೂಡು ರಸ್ತೆಯಿಂದ ಪಟೇಲ್ ಚೌಕ್ ವರೆಗೆ ಸುಮಾರು 600 ಮೀ ಇರುವ ರಸ್ತೆಯಲ್ಲಿ ಕಾಲಿಡಲಾಗದಂತೆ ವಿದ್ಯಾರ್ಥಿಗಳು ನೆರೆದಿದ್ದರು. ನಾನು ವಿದ್ಯಾರ್ಥಿಗಳ ಮಧ್ಯೆ ಇರುಕಿಸಿಕೊಂಡೆ. ಬಿಸಿಲ ಧಗೆಕೈಕಾಲು ಮಿಸುಕಾಡಿಸಲು ಆಗುತ್ತಿರಲಿಲ್ಲ.

ಜನ ನಿಭಿಡತೆಯಲ್ಲಿ ಉಸಿರು ಕಟ್ಟಿದಂತಾಗಿತ್ತು. ಅಲ್ಲಿಯೇ ನಿಂತರೆ, ಮುಂದಿರುವ ಪಟೇಲ್ ಚೌಕಲ್ಲಿ ಏನಾಗುತ್ತಿದೆಯೆಂದು ನೋಡಲು ಸಾಧ್ಯವಾಗುತ್ತಿರಲಿಲ್ಲ. ವಿದ್ಯಾರ್ಥಿಗಳ ಮಧ್ಯೆ ಸಾವರಿಸಿಕೊಂಡು ಕಿರುರಸ್ತೆಯೊಂದರ ಬಳಿ ಬಂದೆ. ಬ್ಯಾರಿಕೇಡ್ ಇದ್ದ ಆ ಕಿರುರಸ್ತೆಯಲ್ಲಿ ಒಳಬರಲು ಬಿಡದೆ, ಹೊರಗೆ ಹೋಗಲು ಮಾತ್ರ ಪೊಲೀಸರು ಬಿಡುತ್ತಿದ್ದರು. ಅಲ್ಲಿಂದ ಬಳಸಿಕೊಂಡು ಮುಖ್ಯರಸ್ತೆಯಲ್ಲಿ ಸಾಗಿ ಪಟೇಲ್ ಚೌಕಿಗೆ ಬಂದರೆ, ಅಲ್ಲಿ ಮೆಟ್ರೊ ಸ್ಟೇಷನ್ ಗಳಲ್ಲಿ ವಿದ್ಯಾರ್ಥಿಗಳನ್ನು ತಡೆ ಹಿಡಿದಿದ್ದರೂ, ಟಿಕೇಟ್ ಚೆಕ್ಕಿಂಗ್ ಪಾಯಿಂಟನ್ನು ಹಾರಿ ಬರುತ್ತಲೇ ಇದ್ದರು!

ಸುಮಾರು ಮೂರುವರೆ ಹೊತ್ತಿಗೆ ಪಟೇಲ್ ಚೌಕಿನಲ್ಲಿ ಬೆರಳೆಣಿಕೆಯಷ್ಟಿದ್ದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗ್ತತೊಡಗಿತು. ಜಂತರ್ ಮಂತರ್ ನಲ್ಲಿ ಇದ್ದವರು ಅಲ್ಲಿಯೇ ಇದ್ದಾರೆ. ಅಲ್ಲಿ ಏನು ನಡೆಯುತ್ತಿದೆ ತಿಳಿಯುತ್ತಿರಲಿಲ್ಲ. ಅದರಾಚೆ ಇದ್ದ ಬ್ಯಾರಿಕೇಡ್ ಮುರಿದು ಬಂದವರನ್ನು ತಡೆ ಹಿಡಿದು ನಿಲ್ಲಿಸಲಾಗಿ, ಹೆಚ್ಚಿದ್ದ ಪೊಲೀಸ್ ಪಡೆಗಳನ್ನು ಪ್ರತಿರೋಧಿಸಿ ಹೊರ ಬರುವುದು ಅವರಿಗೆ ಸಾಧ್ಯವಿರಲಿಲ್ಲ.

ಆದರೆ, ಪಟೇಲ್ ಚೌಕದಲ್ಲಿದ್ದ ಸುಮಾರು ಮೂವತ್ತು ನಲವತ್ತು ಸಂಖ್ಯೆಯಲ್ಲಿದ್ದ ವಿದ್ಯಾರ್ಥಿ ಯುವಕರು, ಬ್ಯಾರಿಕೇಡ್ ಒಳಗೆ ಸಿಕ್ಕು ಬಿದ್ದವರಿಗೆ ಕಾದು ಸಾಕಾಗಿ ನಾವಷ್ಟೇ ಮಂದಿ ಸಂಸತ್ತಿಗೆ ಹೊರಡೋಣ ಎಂದು ಅಲ್ಲಿದ್ದವರನ್ನು ಹುರಿದುಂಬಿಸಿ, ಸರ್ಕಲ್ ನ ಮತ್ತೊಂದು ಬದಿಗಿದ್ದ ಸಂಸತ್ ಮಾರ್ಗ್ ರಸ್ತೆಯಲ್ಲಿ ಜಮಾವಣೆಯಾಗತೊಡಗಿದರು. ಅಲ್ಲಿಂದ ಕೇವಲ ಅರ್ಧ ಕಿಲೋಮೀಟರ್ ದೂರದಲ್ಲೇ ಸಂಸತ್ ಭವನ ಇದ್ದದ್ದು.

ಈ ಜಾಗದಲ್ಲಿ ಪೊಲೀಸ್ ಕಾವಲು ಅಷ್ಟಿರಲಿಲ್ಲ. ಬ್ಯಾರಿಕೇಡ್ ಕೂಡ ಒಂದೇ ಸಾಲಿತ್ತು. ಬಹುಶಃ ಪೊಲೀಸರು ಪಟೇಲ್ ಚೌಕ್ ನಿಂದ ಆಚೆಗೆ ಬರುವಷ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು ನಿರೀಕ್ಷಿಸಿರಲಿಲ್ಲ ಅನಿಸುತ್ತದೆ. ಟಾಲ್ ಸ್ಟಾಯ್ ಮಾರ್ಗ್ ನಲ್ಲಿ ಮಧ್ಯಾಹ್ನ ಏನಾಯಿತೊ ಇಲ್ಲಿಯೂ ಅದೇ ಪುನರಾವರ್ತನೆಯಾಯಿತು.

ಕೆಲವು ವಿದ್ಯಾರ್ಥಿಗಳು, ಮಧ್ಯಮ ವಯಸ್ಕ ಹೆಣ್ಣು ಪೋಷಕರು ಸಂಸತ್ ಗೆ ಹೋಗಲು ಬಿಡುವಂತೆ ದುಂಬಾಲು ಬಿದ್ದರು. ಆದರೆ, ಪೊಲೀಸರು ಬಿಡಲು ಸುತರಾಂ ಒಪ್ಪಲಿಲ್ಲ. ಕೇವಲ ಮೂವತ್ತರಷ್ಟಿದ್ದ ವಿದ್ಯಾರ್ಥಿಗಳ ಸಂಖ್ಯೆ ಬರಬರುತ್ತ ಹೆಚ್ಚಾಗಿ, ನಿರಾಯಾಸವಾಗಿ ಬ್ಯಾರಿಕೇಡ್ ಗಳನ್ನು ಪಕ್ಕಕ್ಕೆ ಸರಿಸಿ ಘೋಷಣೆ ಕೂಗುತ್ತ ಸಂಸತ್ ಭವನದತ್ತ ಓಡತೊಡಗಿದರು. ಆ ದಾರಿಯಲ್ಲಿ ಅರ್ಧ ದೂರ ಕ್ರಮಿಸಿರಬಹುದುರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕಟ್ಟಡ ದಾಟಿ ತುಸು ದೂರ ಕ್ರಮಿಸುವಷ್ಟರಲ್ಲಿ ಅಲ್ಲಿದ್ದ ಕೆಲವೇ ಪೊಲೀಸರು ತಡೆ ಹಾಕಿದರು. ಅಲ್ಲಿ ಬ್ಯಾರಿಕೇಡ್ ಇರಲಿಲ್ಲ. ಸಂಸತ್ ಭವನ ಅಲ್ಲಿಂದ ಕೇವಲ ಕಾಲು ಕಿಲೋಮೀಟರ್ ದೂರದಲ್ಲಿರಬಹುದು. ಬೇಡಿಕೊಂಡರೂ ಪೊಲೀಸರು ಬಿಡದಾಗ ವಿದ್ಯಾರ್ಥಿಗಳು '' '' ಎಂದು ಕೂಗುತ್ತ ರಸ್ತೆಯಲ್ಲೇ ಕುಳಿತರು.

ವಿದ್ಯಾರ್ಥಿಗಳು ಬರುವುದು ಹೆಚ್ಚುತ್ತಲೇ ಇತ್ತು. ಪೊಲೀಸರು ಹಿಂದೆ ಸರಿಯುವಂತೆ ಹೇಳಿದರೂ ವಿದ್ಯಾರ್ಥಿಗಳು ಕೇಳುವ ಸ್ಥಿತಿಯಲ್ಲಿರಲಿಲ್ಲ. ಈಗ ಪೊಲೀಸರು ಲಾಠಿ ಚಾರ್ಜ್ ಆರಂಭಿಸಿ, ಗುಂಪನ್ನು ಚದುರಿಸ ತೊಡಗಿದರು. ಎಲ್ಲರೂ ದಿಕ್ಕಾಪಾಲಾಗಿ ಓಡಿದೆವು. ಕೆಲವರು ಲಾಠಿ ಏಟು ತಿಂದರು. ಕೆಲವರು ಬಿದ್ದು ಗಾಯ ಮಾಡಿಕೊಂಡರು. ಆದರೆ, ದೂರ ಓಡಿ ಹೋದವರು ತಿರುಗಿ ಬಂದು ಪೊಲೀಸರ ಎದುರಿದೆ ಹೆದರದೆ ನಿಲ್ಲುತ್ತಿದ್ದದ್ದು ಬೆರಗಾಗುವಂತಿತ್ತು. ಪ್ರತಿಭಟನಾಕಾರರಲ್ಲಿ ಯಾವ ಅಂಜಿಕೆ ಇರಲಿಲ್ಲ.

ಆವರೆಗೆ ನಾನು ಸತತವಾಗಿ ಮೊಬೈಲಿನಲ್ಲಿ ಶೂಟಿಂಗ್ ಮಾಡುತ್ತಿದ್ದರಿಂದ ಬ್ಯಾಟರಿ ಖಾಲಿಯಾಗಿ ಮೊಬೈಲ್ ಆಫ್ ಆಗುವ ಹಂತ ತಲುಪಿತ್ತು. ಕನ್ನಡ ಸುದ್ದಿ ವಾಹಿನಿಯೊಂದು ಕರೆ ಮಾಡಿ, ಪ್ರತಿಭಟನೆಯ ಲೈವ್ ಫೂಟೇಜ್ ಕಳುಹಿಸಲು ಹೇಳಿ, ಸಂದರ್ಶನಕ್ಕಾಗಿ ಕೋರಿದರು. ಆದರೆ, ಜಂತರ್ ಮಂತರ್ ಸುತ್ತ ಸುಮಾರು ಮೂರ್ನಾಲ್ಕು ಕಿಲೋಮೀಟರ್ ಸುತ್ತಳತೆಯಲ್ಲಿ ಕಳೆದ ದಿನಗಳಿಂದ ಮೊಬೈಲ್ ಸಂಪರ್ಕವನ್ನು ಸರಕಾರ ನಿರ್ಬಂಧಿಸಿತ್ತು. ಹಾಗಾಗಿ ಲೈವ್ ಸಂದರ್ಶನ ಸಾಧ್ಯವಾಗುತ್ತಿರಲಿಲ್ಲ.

ನಾಲ್ಕುವರೆ ಹೊತ್ತಿಗೆ ಮಳೆ ಸುರಿಯತೊಡಗಿತು. ಪಟೇಲ್ ಚೌಕದಲ್ಲಿ ಈ ಮೊದಲು ಸರಾಗವಾಗಿ ಸಾಗುತ್ತಿದ್ದ ಸಂಚಾರವು ಬಂದಾಗಿ ವಾಹನಗಳು ಸಂಪೂರ್ಣ ನಿಂತಲ್ಲೇ ನಿಂತವು. ಸರ್ಕಲ್ ನ ರಸ್ತೆಯಲ್ಲಿಯೇ ಜಮಾವಣೆಯಾದ, ಬಸ್ ಗಳ ಮೇಲೆತ್ತಿದ ವಿದ್ಯಾರ್ಥಿಗಳು ಮಳೆಯಲ್ಲಿ ನೆನೆಯುತ್ತಲೇ ಧರ್ಮೇಂದ್ರ ಪ್ರಧಾನ್ ವಿರುದ್ಧ ಘೋಷಣೆ ಕೂಗುತ್ತಿದ್ದರು.

ಬ್ಯಾಟರಿ ಇಲ್ಲದೆ ನನ್ನ ಮೊಬೈಲ್ ಬಂದಾಯಿತು. ಧೋ ಎಂದು ಸುರಿಯುತ್ತಿದ್ದ ಮಳೆ. ಬಿಸಿಲಲ್ಲಿ ನಡೆದು, ಓಡಿ ದಣಿವಾಗಿತ್ತು. ಹಸಿವಿನಿಂದ ಹೊಟ್ಟೆ ಚುರುಗುಟ್ಟುತ್ತಿತ್ತು. ಮನಸ್ಸಿಲ್ಲದ ಮನಸ್ಸಿಂದ, ಹೊಟೇಲ್ ಗೆ ಹೋಗಲು, ಆಟೊಗಳು ಸಿಗದೆ ಚೂನಾಮಂಡಿ ಕಡೆಗೆ ನಡಿಗೆಯಲ್ಲೇ ಹೊರಟೆ.

ಹೊಟೇಲ್ ರೂಮಲ್ಲಿ ಒಂದೆರೆಡು ತಾಸು ಕಳೆದರೂ, ನೈಟ್ ವರ್ಕ್ ಸಮಸ್ಯೆಯಿಂದ ಲೈವ್ ಪತ್ರಿಕಾ ಸಂದರ್ಶನ ಸಾಧ್ಯವಾಗಲಿಲ್ಲ. ಹೊರಗೆ ಹೋಗಿ ಗೂಡಂಗಡಿಯಲ್ಲಿ ಸಿಕ್ಕ ಅರೆಬರೆ ಬೆಂದ ಫ್ರೈಡ್ ರೈಸನ್ನು ತಿಂದು ಬಂದೆ.

ಬಹಳ ದಣಿವಾಗಿತ್ತಾದ್ದರಿಂದ ಮತ್ತೆ ಪ್ರತಿಭಟನೆಗೆ ಹೋಗಲು ಸಾಧ್ಯವಾಗಲಿಲ್ಲ. ಹಾಗೆಂದು ರೂಮ್ ನಲ್ಲಿಯೇ ಉಳಿದು, ಸಮಾಧಾನವಿರಲಿಲ್ಲ. ಏನೋ ಆತಂಕ! ನಾನಿದ್ದ ವಿದ್ಯಾರ್ಥಿಗಳ ಗುಂಪು ಪಾರ್ಲಿಮೆಂಟ್ ವರೆಗೂ ಹೋದರೊ ಅಥವಾ ಪೊಲೀಸ್ ದಾಳಿಗೆ ತುತ್ತಾದರೊತಿಳಿಯಲಿಲ್ಲ.

ದೇಶದ ಪ್ರಮುಖ ಸುದ್ದಿ ಚಾನೆಲ್ ಗಳು ಪ್ರತಿಭಟನೆಯನ್ನು ದೇಶದ್ರೋಹಿ ಕೃತ್ಯವೆಂದು ಬಿಂಬಿಸುತ್ತಿರುವ ಹೊತ್ತಲ್ಲಿ, ಯುಟ್ಯೂಬ್ ನಲ್ಲಿ ಮಾತ್ರ ಬಿತ್ತರವಾಗುತ್ತಿದ್ದ ಕೆಲವೇ ಕೆಲವು ಇಂಡಿಪೆಂಡೆಟ್ ನ್ಯೂಸ್ ಚಾನೆಲ್ ಗಳಲ್ಲಿ ಪ್ರತಿಭಟನೆಯ ಬೆಳವಣಿಗೆಯನ್ನು ಶೋಧಿಸುತ್ತ ಕೂತೆ. ಪೊಲೀಸ್ ಮತ್ತು ಪೊಲೀಸ್ ವೇಷದ ಗೂಂಡಾಗಳು ವಿದ್ಯಾರ್ಥಿಗಳ ಮೇಲೆ ಬರ್ಬರವಾಗಿ ದಾಳಿ ಮಾಡಿದ ದೃಶ್ಯಗಳು ಬಿತ್ತರವಾಗುತ್ತಿದ್ದವು. ಎದೆ ಒಡೆದುಹೋಯಿತು. ಲಾಠಿ ಚಾರ್ಜ್ ಮಾಡಿ, ಟಿಯರ್ ಗ್ಯಾಸ್ ಸಿಡಿಸಿ, ಪೆಲೇಟ್ ಗನ್ ಬಳಸಿವಿದ್ಯಾರ್ಥಿಗಳನ್ನು ಪ್ರಾಣಿಗಳಂತೆ ಅಟ್ಟಾಡಿಸಿಕೊಂಡು ಹೊಡೆಯುತ್ತಿದ್ದರು. ಆ ಕ್ಷಣ ರೂಮಿಗೆ ಬಂದು ತಪ್ಪು ಮಾಡಿದೆ ಅನಿಸಿತು.

ಮತ್ತಷ್ಟು ನೋವು ಉಂಟಾದದ್ದು ಜಂತರ್ ಮಂತರ್ ಸೈಟಿಗೆ ನುಗ್ಗಿದ ಪೊಲೀಸರು ಅಲ್ಲಿದ್ದ ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ ಮಾಡಿ ಅಲ್ಲಿಂದ ಓಡಿಸಿದ್ದ ದೃಶ್ಯಗಳು. ಅಲ್ಲಿದ್ದ ವೇದಿಕೆ, ಉಪವಾಸ ನಿರಶನ ಕೂತಿದ್ದ ಟೆಂಟ್ ಗಳನ್ನು ಧ್ವಂಸಮಾಡಿ, ಈ ಮುಂಚೆ ಅಲ್ಲಿ ಏನೂ ಇರಲಿಲ್ಲವೇನೊ ಅನ್ನುವಂತೆ ನೆಲಸಮ ಮಾಡಿದ್ದರು. ವಿದ್ಯಾರ್ಥಿ ಯುವಕರಿಂದ ತುಂಬಿ ತುಳುಕುತ್ತಿದ್ದ ಸೈಟ್ ಈಗ ಸ್ಮಶಾನದಂತಿತ್ತು. ಎದೆ ಭಾರವಾಯಿತು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR